# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಜೂನ್ 27, 2022

ಸಂಪುಟ : 49 ಸಂಚಿಕೆ : 44 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಎಸ್‌ಡಿಪಿಐನಿಂದ ಮಾತ್ರ ಬಿಜೆಪಿ ಎದುರಿಸಲು ಸಾಧ್ಯ

**ಎಸ್‌ಡಿಪಿಐ ಪಕ್ಷದ ಜನಾಧಿಕಾರ ಸಮಾವೇಶ**

ದಾವಣಗೆರೆ, ಜೂ.26- ಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಬಹುತೇಕ ಕ್ಷೇತ್ರಗಳಲ್ಲಿ ಎಸ್‌ಡಿಪಿಐ ಗೆಲುವು ಸಾಧಿಸಲಿದೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಶಾಫಿ ಬೆಳ್ಳಾರೆ ತಿಳಿಸಿದರು.

ಅವರು, ಇಂದು ನಗರದ ಮಂಡಕ್ಕಿ ಭಟ್ಟಿ ಬಡಾವಣೆಯಲ್ಲಿರುವ ಮಿಲಾದ್ ಮೈದಾನದಲ್ಲಿ ಎಸ್‌ಡಿಪಿಐ ಪಕ್ಷದ ಜನಾಧಿಕಾರ ಸಮಾವೇಶದಲ್ಲಿ ಮಾತನಾಡಿದರು.

ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲೂ ಎಸ್‌ಡಿಪಿಐ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದ್ದು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಪಕ್ಷ ಮತ್ತು ಆರ್‌ಎಸ್‌ಎಸ್ ಸಂಘಟನೆಯನ್ನು ಸಮರ್ಥವಾಗಿ ಎದುರಿಸಲು ಎಸ್‌ಡಿಪಿಐ ನಿಂದ ಮಾತ್ರ ಸಾಧ್ಯ. ಬೇರೆ ಯಾವುದೇ ಪಕ್ಷದಿಂದ ಸಾಧ್ಯವಿಲ್ಲ. ನಮ್ಮ ಪಕ್ಷದ ಯಾವ ಅಭ್ಯರ್ಥಿಯೂ ಶಾಸಕರಾಗದೇ ಹೋದರೆ ದಲಿತರ ಮತ್ತು ಅಲ್ಪ ಸಂಖ್ಯಾತರ ಪರವಾಗಿಯೇ ಇರುತ್ತೇವೆ ಎಂದು ಹೇಳಿದರು.

ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ನಾಡ ಬಾವುಟವನ್ನು ಒಳ ಉಡುಪಿಗೆ ಹಾಕಿಕೊಂಡಿದ್ದ ಚಕ್ರತೀರ್ಥ ಅವರನ್ನು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರನ್ನಾಗಿ ಮಾಡಿರುವುದು ಅಕ್ಷಮ್ಯ ಅಪರಾಧ. ಈ ಹಿನ್ನೆಲೆಯಲ್ಲಿ ನಾವು ಶಾಲೆಗಳಿಗೆ ಪಠ್ಯ ಪುಸ್ತಕ ವಿತರಣೆಗೆ ಅವಕಾಶ ನೀಡುವುದಿಲ್ಲ. ಪಠ್ಯ ಪುಸ್ತಕಗಳನ್ನು ಮರು ಮುದ್ರಣ ಮಾಡಲು 90 ಕೋಟಿ ರೂ. (2ನೇ ಪುಟಕ್ಕೆ)

## ಉಪ ಚುನಾವಣೆಯಲ್ಲಿ ಬಿಜೆಪಿಗೆ ಬಲ

**ಉತ್ತರ ಪ್ರದೇಶದ ಎರಡು ಲೋಕಸಭೆಗಳಲ್ಲಿ ಜಯ, ಎಸ್‌ಪಿಗೆ ತೀವ್ರ ಮುಖಭಂಗ**

**ಪಂಜಾಬ್‌ನಲ್ಲಿ ಹಾಲಿ ಮುಖ್ಯಮಂತ್ರಿ ಹೊಂದಿದ್ದ ಲೋಕಸಭಾ ಕ್ಷೇತ್ರ ಕಳೆದುಕೊಂಡ ಆಮ್ ಆದ್ಮಿ ಪಾರ್ಟಿ**

**ತ್ರಿಪುರದಲ್ಲಿ ಮುಖ್ಯಮಂತ್ರಿ ಮಾಣಿಕ್ ಸಹಾ ಗೆಲುವು**

ನವದೆಹಲಿ, ಜೂ. 26 – ಉತ್ತರ ಪ್ರದೇಶದ ರಾಮಪುರ ಹಾಗೂ ಅಜಮ್‌ಘಡ ಲೋಕಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಗೆಲುವು ದಾಖಲಿಸಿರುವ ಬಿಜೆಪಿ, ರಾಜ್ಯದಲ್ಲಿ ತನ್ನ ಸ್ಥಾನ ಬಲಪಡಿಸಿಕೊಂಡಿದೆ. ತ್ರಿಪುರಾದಲ್ಲಿ ನಡೆದ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಮುಖ್ಯಮಂತ್ರಿ ಮಾಣಿಕ್ ಸಹಾ ಸೇರಿದಂತೆ ಬಿಜೆಪಿಯ ಮೂವರು ಗೆದ್ದಿದ್ದಾರೆ.

ಪಂಜಾಬ್‌ನ ಸಂಗ್ರೂರ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಕಹಿ ಸೋಲು ಕಂಡಿದೆ. ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಈ ಕ್ಷೇತ್ರವನ್ನು ತೆರವುಗೊಳಿಸಿದ್ದರು. ಇಲ್ಲಿ ಶಿರೋಮಣಿ ಅಕಾಲಿ ದಳ (ಅಮೃತ್‌ಸರ್) ನಾಯಕ ಸಿಮ್ರಾನ್‌ಜಿತ್ ಮಾನ್ ಗೆಲುವು ಸಾಧಿಸಿದ್ದಾರೆ. ದೆಹಲಿಯ ರಾಜಿಂದರ್ ನಗರ್ ವಿಧಾನಸಭಾ ಕ್ಷೇತ್ರವನ್ನು ಆಮ್ ಆದ್ಮಿ ಪಾರ್ಟಿ ಉಳಿಸಿಕೊಂಡಿದೆ.

ತ್ರಿಪುರದಲ್ಲಿ ಕಾಂಗ್ರೆಸ್ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಇದರೊಂದಿಗೆ ರಾಜ್ಯದಲ್ಲಿ ಪಕ್ಷ ಖಾತೆ ತೆರೆದಿದೆ. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ ಒಂದು ಸ್ಥಾನದಲ್ಲೂ ಗೆದ್ದಿರಲಿಲ್ಲ.

ಜಾರ್ಖಂಡ್‌ನ ಮಂದರ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದೆ.

ಆಂಧ್ರ ಪ್ರದೇಶದ ಆತ್ಮಕುರು ವಿಧಾನಸಭಾ ಕ್ಷೇತ್ರದಲ್ಲಿ ಆಡಳಿತಾರೂಢ ವೈ.ಎಸ್.ಆರ್. ಕಾಂಗ್ರೆಸ್ ಗೆದ್ದಿದೆ.

ಜೂನ್ 23ರ ಭಾನುವಾರ ಮೂರು ಲೋಕಸಭೆ ಹಾಗೂ ಏಳು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಮತದಾನ ನಡೆದಿತ್ತು.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷಕ್ಕೆ ತೀವ್ರ ಮುಖಭಂಗವಾಗಿದೆ. ಅಜಮ್‌ಘಡ ಹಾಗೂ ರಾಮಪುರ ಎರಡೂ ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷ ಸೋಲು ಕಂಡಿದೆ. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹಾಗೂ ಪಕ್ಷದ ಹಿರಿಯ ನಾಯಕ ಅಜಮ್ ಖಾನ್ ಅವರು ರಾಜ್ಯ ವಿಧಾನಸಭೆಗೆ ಆಯ್ಕೆಯಾದ ನಂತರ ಲೋಕಸಭಾ ಕ್ಷೇತ್ರಗಳಿಗೆ ರಾಜೀನಾಮೆ ನೀಡಿದ್ದರು.

ರಾಮಪುರ ಕ್ಷೇತ್ರದಲ್ಲಿ ಬಿಜೆಪಿಯ ಘನಶ್ಯಾಂ ಲೋಧಿ ಅವರು 42 ಸಾವಿರ ಮತಗಳಿಂದ ಗೆದ್ದಿದ್ದಾರೆ. ಅಜಮ್ ಖಾನ್ ನಿಕಟವರ್ತಿ ಮೊಹಮ್ಮದ್ ಆಸಿಮ್ ರಾಜಾ ಅವರಿಗೆ ಸೋಲಾಗಿದೆ.

ಅಜಂಘಡದಲ್ಲಿ ಬಿಜೆಪಿಯ ದಿನೇಶ್ ಲಾಲ್ ಯಾದವ್ ಅವರು ನಿಕಟ ಸ್ಪರ್ಧಿ ಧರ್ಮೇಂದ್ರ ಯಾದವ್ ವಿರುದ್ಧ 8,679 (2ನೇ ಪುಟಕ್ಕೆ)

## ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಶೇ.25 ಲಾಭಾಂಶ



ದಾವಣಗೆರೆ. ಜೂ. 26 - ಪ್ರಸ್ತುತ 5 ಕೋಟಿ 44 ಲಕ್ಷ ರೂ.ಷೇರು ಬಂಡವಾಳದೊಂದಿಗೆ 307 ಕೋಟಿ 17 ಲಕ್ಷ ರೂ. ಠೇವಣಾತಿಗಳನ್ನು ಹೊಂದಿ 250 ಕೋಟಿ 19 ಲಕ್ಷ ರೂ. ಸಾಲ ಮತ್ತು ಮುಂಗಡಗಳನ್ನು ಕೊಟ್ಟಿರುವ ದಿ ದಾವಣಗೆರೆ ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ವರ್ಷಾಂತ್ಯಕ್ಕೆ 8 ಕೋಟಿ 62 ಲಕ್ಷ ರೂ. ಲಾಭ ಗಳಿಸಿದ್ದು ಆದಾಯ ತೆರಿಗೆ ಪಾವತಿಸಿ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ 5 ಕೋಟಿ 13 ಲಕ್ಷ ರೂ. ನಿವ್ವಳ ಲಾಭ ಹೊಂದಿದ್ದು, ಶೇ.25 ಡಿವಿಡೆಂಡ್ ಘೋಷಿಸುತ್ತಿದೆಯೆಂದು ಬ್ಯಾಂಕಿನ ಅಧ್ಯಕ್ಷ ಎನ್.ಎ.ಮುರುಗೇಶ್ ಹೆಮ್ಮೆಯಿಂದ ಹೇಳಿದರು.


ಅವರಿಂದು ಬ್ಯಾಂಕಿನ 50ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಇದು ಐತಿಹಾಸಿಕ ಪ್ರಮಾಣದ ಲಾಭವಾಗಿದ್ದು ಸದಸ್ಯರ, ಗ್ರಾಹಕರ, ಸಿಬ್ಬಂದಿಯ ಹಾಗೂ ನಿರ್ದೇಶಕ ಮಂಡಳಿಯ ಸಹಕಾರದಿಂದ ಸಾಧ್ಯವಾಗಿದೆ ಎಂದರು. ಕೇವಲ 61 ಜನ ಸದಸ್ಯರಿಂದ ಮೊದಲ್ಗೊಂಡ ಬ್ಯಾಂಕ್ ಹಾಲಿ 11484 ಸದಸ್ಯ ಬಲ ಹೊಂದಿದ್ದು ಅತ್ಯುತ್ತಮ ಮತ್ತು ಕ್ಷಿಪ್ರಗತಿಯ ಸೇವಾ ದೃಷ್ಟಿಯಿಂದ ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆಯಲ್ಲೂ ಮುಂದಿದೆ ಎಂದರು. ಸದಸ್ಯರ ಮತ್ತು ಗ್ರಾಹಕರ ಅವಶ್ಯಕತೆಗಳು ಹಾಗೂ ಅನುಕೂಲಕ್ಕೆ ತಕ್ಕಂತೆ ಬ್ಯಾಂಕಿಂಗ್ ಸೇವೆ ಒದಗಿಸುವ ಜವಾಬ್ದಾರಿ ತಮ್ಮ ಮೇಲಿದ್ದು ಬಾಕಿ ವಸೂಲಾತಿ ಬಗ್ಗೆ ನಿರ್ದಾಕ್ಷಿಣ್ಯವಾಗಿ ವ್ಯವಹರಿಸಲು ತೀರ್ಮಾನಿಸಿದ್ದೇವೆ ಎಂದರು.

ಆರ್ಥಿಕ ಸಂಸ್ಥೆ ನಿಭಾಯಿಸುವುದು ಸುಲಭವಲ್ಲ, ದೊಡ್ಡ ಜವಾಬ್ದಾರಿ ಅಷ್ಟೇ ದೊಡ್ಡ ಉತ್ತರದಾಯಿತ್ವ ಇರುತ್ತದೆ, ಕೋವಿಡ್ ಸಾಂಕ್ರಾಮಿಕದಿಂದಾಗಿ ಅನುತ್ಪಾದಕ ಆಸ್ತಿ ಪ್ರಮಾಣ ತುಸು ಹೆಚ್ಚಾದರೂ ಅದನ್ನು ಶೇಕಡ ಒಂದಕ್ಕಿಂತ ಕಡಿಮೆ ಮಾಡಲು ಎಲ್ಲ ಕ್ರಮಗಳನ್ನೂ ಕೈಗೊಳ್ಳುತ್ತಿದ್ದೇವೆ, ಬ್ಯಾಂಕಿನ ಠೇವಣಾತಿಗಳನ್ನು 315 ಕೋಟಿ ರೂ.ಗೆ ಹೆಚ್ಚಿಸಬೇಕೆಂದಿದೆ ಎಂದರು. ಆಪದ್ಧನ ಮತ್ತು ಇತರೆ ನಿಧಿಗಳು 51ಕೋಟಿ 17ಲಕ್ಷ ರೂ.ನಷ್ಟಿದ್ದು (6ನೇ ಪುಟಕ್ಕೆ)

## ಕಾರ್ಯನಿರತ ಪತ್ರಕರ್ತರ ಸಂಘದ ತಾ. ಘಟಕಗಳಲ್ಲಿ ಚುನಾವಣೆ



ಡಿ.ಎನ್ ಶಾಂಭವಿ
ಅಧ್ಯಕ್ಷರು, ಹರಿಹರ



ಜಿ.ಎಸ್.ಚಿದಾನಂದ
ಅಧ್ಯಕ್ಷರು, ಜಗಳೂರು



ವೀರೇಶ್ ಪ್ರಸಾದ್
ಅಧ್ಯಕ್ಷರು, ಚನ್ನಗಿರಿ



ಕೆ.ಎಸ್.ಯೋಗೇಶ್
ಅಧ್ಯಕ್ಷರು, ಹೊನ್ನಾಳಿ

ದಾವಣಗೆರೆ, ಜೂ.26- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಘಟಕಗಳಿಗೆ ಇಂದು ನಡೆದ ಚುನಾವಣೆಯಲ್ಲಿ ಜಗಳೂರು ತಾಲ್ಲೂಕು ಅಧ್ಯಕ್ಷರಾಗಿ ಸಂಘದ ಹಾಲಿ ಅಧ್ಯಕ್ಷ ಜಿ.ಎಸ್. ಚಿದಾನಂದ ಅವರು ಮತ್ತೊಂದು ಅವಧಿಗೆ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಉಳಿದಂತೆ ; ಹರಿಹರ, ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಚುನಾವಣೆ ನಡೆದಿದ್ದು, ಹರಿಹರ ತಾಲ್ಲೂಕು ಅಧ್ಯಕ್ಷ ಶ್ರೀಮತಿ ಡಿ.ಎನ್. ಶಾಂಭವಿ, ಹೊನ್ನಾಳಿ ತಾಲ್ಲೂಕು ಅಧ್ಯಕ್ಷರಾಗಿ ಕೆ.ಎಸ್.ಯೋಗೀಶ್, ಚನ್ನಗಿರಿ ತಾಲ್ಲೂಕು ಅಧ್ಯಕ್ಷರಾಗಿ ಕೆ.ಎಸ್. ವೀರೇಶ್ ಪ್ರಸಾದ್ ಆಯ್ಕೆಯಾಗಿದ್ದಾರೆ.

ಈ ನಾಲ್ಕು ತಾಲ್ಲೂಕು ಘಟಕಗಳ ಪದಾಧಿಕಾರಿಗಳ ಸ್ಥಾನಗಳಿಗೆ ಆಯಾ ತಾಲ್ಲೂಕು ಕೇಂದ್ರಗಳ ಪತ್ರಿಕಾ ಭವನದಲ್ಲಿ ಇಂದು ಶಾಂತಿಯುತ ಚುನಾವಣೆಯ ನಂತರ, ಸಂಜೆ ವೇಳೆಗೆ ಮತ ಎಣಿಕೆ ಕಾರ್ಯ ನಡೆದು ಫಲಿತಾಂಶ ಪ್ರಕಟಿಸಲಾಯಿತು ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ತಿಳಿಸಿದ್ದಾರೆ.

ಹರಿಹರ ತಾಲ್ಲೂಕಿನಲ್ಲಿ ಎನ್.ಆರ್. ರವಿ, ಜೆ.ಎಸ್. ವೀರೇಶ್ ಚುನಾವಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು. ಹೊನ್ನಾಳಿ ತಾಲ್ಲೂಕಿನಲ್ಲಿ ಆರ್.ಎಸ್. ತಿಪ್ಪೇಸ್ವಾಮಿ, ಬಿ.ಎಸ್. ಮುದ್ದಯ್ಯ ಚುನಾವಣಾಧಿಕಾರಿಗಳಾಗಿದ್ದರು. ಅವರಿಗೆ ಮೃತ್ಯುಂಜಯ ಪಾಟೀಲ್ ಸಹಾಯಕರಾಗಿದ್ದರು.

ಚನ್ನಗಿರಿ ತಾಲ್ಲೂಕಿನಲ್ಲಿ ಸಿ. ವೇದಮೂರ್ತಿ, ಇಂದೂಶೇಖರ್ ನಿಶಾನಿಮಠ ಚುನಾವಣಾಧಿಕಾರಿಗಳಾಗಿದ್ದರು. ಜಗಳೂರು ತಾಲ್ಲೂಕಿನಲ್ಲಿ ಹೆಚ್. ಚಂದ್ರಶೇಖರ್, ಬಿ. ಚನ್ನವೀರಯ್ಯ ಚುನಾವಣಾಧಿಕಾರಿಗಳಾಗಿದ್ದರು. ಅವರಿಗೆ ಎಂ. ಗುರುಮೂರ್ತಿ ಸಹಾಯಕರಾಗಿದ್ದರು.

ಸಂಘದ ರಾಜ್ಯ ಘಟಕದ ಕಾರ್ಯಕಾರಿ ಸಮಿತಿ ಸದಸ್ಯ ಕೆ. ಚಂದ್ರಣ್ಣ ಅವರ ಮಾರ್ಗದರ್ಶನದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. (2ನೇ ಪುಟಕ್ಕೆ)

## ಅಗ್ನಿಪಥ : ವಾಯುಪಡೆಯ 3 ಸಾವಿರ ಹುದ್ದೆಗೆ 56 ಸಾವಿರ ಅರ್ಜಿ

ನವದೆಹಲಿ, ಜೂ. 26 – ಅಗ್ನಿಪಥ ಯೋಜನೆಯಡಿ ವಾಯುಪಡೆಯ 3 ಸಾವಿರ ಸ್ಥಾನಗಳಿಗೆ ಭರ್ತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿದ ಮೂರೇ ದಿನಗಳಲ್ಲಿ 56 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿವೆ.

ಅಗ್ನಿಪಥ ಯೋಜನೆಯಡಿ ವಾಯುಪಡೆಯ ಸ್ಥಾನಗಳಿಗೆ ಅರ್ಜಿ ಸಲ್ಲಿಸುವ ಗಡುವು ಜುಲೈ 5ರಂದು ಪೂರ್ಣಗೊಳ್ಳಲಿದೆ. ಯೋಜನೆಯಡಿ ಆಯ್ಕೆಯಾದ ಅಗ್ನಿವೀರರಿಗೆ ಬರುವ ಡಿಸೆಂಬರ್ 30ರಿಂದ ತರಬೇತಿ ನೀಡಲಾಗುವುದು.

agnipathvayu.cdac.in ವೆಬ್ ತಾಣದ ಮೂಲಕ ಅರ್ಜಿ ದಾಖಲಿಸಬಹುದಾಗಿದೆ. ಈ ಬಗ್ಗೆ ಹೇಳಿಕೆ ನೀಡಿರುವ (3ನೇ ಪುಟಕ್ಕೆ)

## ಶಿವಸೇನೆಯ 15 ಶಾಸಕರಿಗೆ ಕೇಂದ್ರದಿಂದ ಭದ್ರತೆ

ನವದೆಹಲಿ, ಜೂ. 26 – ಬಂಡಾಯ ಎದ್ದಿರುವ ಮಹಾರಾಷ್ಟ್ರದ ಶಿವಸೇನೆಯ 15 ಶಾಸಕರಿಗೆ ಕೇಂದ್ರ ಸರ್ಕಾರ ವೈ-ಪ್ಲಸ್ ಹಂತದ ಭದ್ರತೆ ಒದಗಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಮೇಶ್ ಬೊರನಾರೆ, ಮಂಗೇಶ್, ಕುಡಲ್ಕರ್, ಸಂಜಯ್ ಶಿರ್ಸತ್, ಲತಾಬಾಯಿ ಸೋನಾವಾನೆ, ಪ್ರಕಾಶ್ ಸುರ್ವೆ ಹಾಗೂ (2ನೇ ಪುಟಕ್ಕೆ)




**ಸಾಧನೆಗೆ ಅಭಿನಂದನೆಗಳು**

2021-22ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡ 91 ಅಂಕಗಳಿಸಿ ಅದ್ವಿತೀಯ ಸಾಧನೆ ಮಾಡಿ ಕಾಲೇಜಿಗೂ ಪೋಷಕರಿಗೂ ಹಾಗೂ ಚನ್ನಗಿರಿ ಮನೆತನಕ್ಕೂ ಕೀರ್ತಿ ತಂದಿರುವ ಆರ್.ಜಿ. ಪಿ.ಯು. ಕಾಲೇಜಿನ ವಿದ್ಯಾರ್ಥಿನಿ,

ಶ್ರೀಮತಿ ಸಿ.ಬಿ. ರಶ್ಮಿ ಮತ್ತು ಶ್ರೀ ಭರತ್ ಎಸ್. ಚನ್ನಗಿರಿ ಇವರ ಪುತ್ರಿ

**ನೇಹಾ ಚನ್ನಗಿರಿಗೆ**

ಹಾರ್ದಿಕ ಅಭಿನಂದನೆಗಳು. ಇವಳ ಭವಿಷ್ಯ ಉಜ್ವಲವಾಗಿರಲಿ, ಉನ್ನತ ಶಿಕ್ಷಣದಲ್ಲಿ ಇನ್ನೂ ಉತ್ತಮ ಅಂಕ ಗಳಿಸಲಿ ಎಂದು ಶುಭ ಹಾರೈಸುತ್ತೇವೆ.

- ಸಿ.ಆರ್. ಸತ್ಯನಾರಾಯಣ ಶ್ರೀಮತಿ ಸಿ.ಎಸ್. ದೇವಲೀಲಾ
- ಶ್ರೀಮತಿ ರಾಧಿಕಾ ಗೋಲಿ ಮತ್ತು ಪ್ರವೀಣ್ ಗೋಲಿ
- ಗೋವಿಂದರಾಜ್ ಗುಪ್ತ ಶ್ರೀಮತಿ ವಿಜಯಲಕ್ಷ್ಮಿ
- ಸಿ.ಬಿ. ನಿಹಾಲ್ ✤ ಸಾವನ್ ಗೋಲಿ


## ಲಂಕಾದಲ್ಲಿ ದುಬಾರಿ ಹಣ ಕೊಟ್ಟರೂ ಸಿಗದ ಪೆಟ್ರೋಲ್-ಡೀಸೆಲ್

ಕೊಲಂಬೊ, ಜೂ. 26 – ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕ, ಪೆಟ್ರೋಲ್ ಬೆಲೆಯನ್ನು 50 ರೂ. ಹಾಗೂ ಡೀಸೆಲ್ ಬೆಲೆಯನ್ನು 60 ರೂ.ಗಳಷ್ಟು ಹೆಚ್ಚಿಸಿದೆ. ಎರಡು ತಿಂಗಳಲ್ಲಿ ಮೂರನೇ ಬಾರಿ ಬೆಲೆ ಹೆಚ್ಚಿಸಲಾಗಿದೆ.

ಲಂಕಾದ ಪೆಟ್ರೋಲಿಯಂ ನಿಗಮ ಹಾಗೂ ಲಂಕಾ ಐ.ಒ.ಸಿ.ಗಳು ಬೆಲೆ ಹೆಚ್ಚಳ ಮಾಡಿವೆ. ಇದರಿಂದಾಗಿ ಪೆಟ್ರೋಲ್ ದರ ಲಂಕಾ ರೂಪಾಯಿಯಲ್ಲಿ 470 ರೂ. ಹಾಗೂ 460 ರೂ. ಆಗಿದೆ.

ಬ್ಯಾಂಕಿಂಗ್ ಹಾಗೂ ಸರಕು ಸಾಗಣೆ (3ನೇ ಪುಟಕ್ಕೆ)


**Bachelor of Computer Applications**

BCA @ ICCA

Admissions open for BCA 2022-2023 Batch

Raghu Gurumurthy's ICCA

Scan QR Code for all our resource links



100% Placement Assurance

**INTERFACE COLLEGE OF COMPUTER APPLICATIONS (ICCA)**

(Affiliated to Davanagere University & Approved by Govt. Of Karnataka)

✦ Sai Plaza, #1805/3 and 4, 18th Cross, Anjaneya Badavane, BIET College Road, Opp Vyshnavi Chetana P.U. College, Davangere-577004

www.iccadvg.org iccadvg@gmail.com

+91 88847 68574 | + 91 91108 62161

+ 91 99862 61746 | + 91 90601 30871 City Bus No. 09



## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಎಸ್.ಬಿ. ಅರ್ಪಿತ ಬಿನ್ ಬಸವರಾಜಪ್ಪ, ವಾಸ : ಡಾಲರ್ಸ್ ಕಾಲೋನಿ, ಶಾಮನೂರು ವಿಭಾಗ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಮೇಲ್ಕಂಡ ನನ್ನ ಕಕ್ಷಿದಾರರು ದಾವಣಗೆರೆಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ.122/2021 ರಂತೆ ಷೆಡ್ಯೂಲ್ ಸ್ವತ್ತುಗಳಲ್ಲಿ 1/3ನೇ ಭಾಗದ ಹಿಸ್ಸೆಯನ್ನು ಕೋರಿ ಪಾಲು ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ಸದರಿ ದಾವೆಯಲ್ಲಿ **ಶ್ರೀಮತಿ ವನಿತಾ ಕೋಂ ಕಿರಣಕುಮಾರ್, #23, ಕಾಳಿಕಾದೇವಿ ಮುಖ್ಯರಸ್ತೆ, ದಾವಣಗೆರೆ** ಇವರು ಸದರಿ ದಾವೆಯಲ್ಲಿ 3ನೇ ಪ್ರತಿವಾದಿಯಾಗಿದ್ದು, ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆ ರೀತಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವುದಕ್ಕಾಗಲೀ ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಕ್ಕಾಗಲೀ 3ನೇ ಪ್ರತಿವಾದಿಗೆ ಯಾವುದೇ ರೀತಿಯ ಸಂಪೂರ್ಣ ಹಕ್ಕು, ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಮೇಲ್ಕಂಡ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ದಾವೆಯು ಅಂತಿಮ ತೀರ್ಮಾನವಾಗುವವರೆಗೂ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯುವುದಾಗಲೀ, ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

1. ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ಸ.ನಂ.185/2 ವಿಸ್ತೀರ್ಣ 34.08 ಗುಂಟೆ ಜಮೀನಿಗೆ ಚಕ್ಕುಬಂದಿ: **ಪೂರ್ವ** : ಎಸ್.ಜಿ. ರುದ್ರಪ್ಪ ಇವರ ಜಮೀನು, **ಪಶ್ಚಿಮ** : ಚಂದ್ರಪ್ಪ ಮತ್ತು ಭೀಮಪ್ಪ ಇವರುಗಳ ಸ.ನಂ.185 ರಲ್ಲಿನ ಜಮೀನು, **ಉತ್ತರ** : ಹಳ್ಳ, **ದಕ್ಷಿಣ** : ಇದೇ ಸ.ನಂ.ನಲ್ಲಿನ ಜಮೀನು
2. ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ಸ.ನಂ. 185/6 ವಿಸ್ತೀರ್ಣ 36 ಗುಂಟೆ ಜಮೀನಿಗೆ ಚಕ್ಕುಬಂದಿ: **ಪೂರ್ವ** : ಎಸ್.ಜಿ. ರುದ್ರಪ್ಪ ಇವರ ಜಮೀನು, **ಪಶ್ಚಿಮ** : ಚಂದ್ರಪ್ಪ ಮತ್ತು ಭೀಮಪ್ಪ ಇವರುಗಳ ಸ.ನಂ.185 ರಲ್ಲಿನ ಜಮೀನು, **ಉತ್ತರ** : ಹಳ್ಳ **ದಕ್ಷಿಣ** : ಇದೇ ಸ.ನಂ.ನಲ್ಲಿನ ಜಮೀನು.

**(ಎ.ಎಂ. ಹೆಗಡೆ)**, ವಕೀಲರು
# 82/18, 1st Floor, Next to Indian Bank,
P.B. Road, DAVANGERE. Mobile : **94483 05888**

# ಉಪ ಚುನಾವಣೆಯಲ್ಲಿ ಬಿಜೆಪಿಗೆ ಬಲ

(1ನೇ ಪುಟದಿಂದ) ಮತಗಳ ಗೆಲುವು ಸಾಧಿಸಿದ್ದಾರೆ. ಧರ್ಮೇಂದ್ರ ಅವರು ಅಖಿಲೇಶ್ ಯಾದವ್ ಸಹೋದರ ಸಂಬಂಧಿ.

ದೆಹಲಿಯ ರಾಜಿಂದರ್ ನಗರದಲ್ಲಿ ಆಮ್ ಆದ್ಮಿ ಪಾರ್ಟಿಯ ದುರ್ಗೇಶ್ ಪಾಠಕ್ ಅವರು ಬಿಜೆಪಿಯ ರಾಜೇಶ್ ಭಾಟಿಯಾ ಅವರನ್ನು 11 ಸಾವಿರ ಮತಗಳಿಂದ ಸೋಲಿಸಿದ್ದಾರೆ. ಆದರೆ, ಪಂಜಾಬ್‌ನ ಸಂಗ್ರೂರ್ ಲೋಕಸಭಾ ಕ್ಷೇತ್ರದಲ್ಲಿ ಆಮ್ ಆದ್ಮಿ ಪಾರ್ಟಿಗೆ ಸೋಲಾಗಿರುವುದು ಕಹಿ ತಂದಿದೆ. ಈ ಕ್ಷೇತ್ರದಲ್ಲಿ ಖಲಿಸ್ತಾನದ ಪ್ರತಿಪಾದಕ ಹಾಗೂ ಎಸ್.ಎ.ಡಿ. (ಅಮೃತ್‌ಸರ್) ನಾಯಕ ಸಿಮ್ರಾನ್‌ಜಿತ್ ಸಿಂಗ್ ಮಾನ್ ಅವರು 5,822 ಮತಗಳ ಅಂತರದ ಗೆಲುವು ಕಂಡಿದ್ದಾರೆ.

ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಈ ಹಿಂದೆ ಎರಡು ಬಾರಿ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು. ಮೂರು ತಿಂಗಳ ಹಿಂದಷ್ಟೇ ನಡೆದ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ 117 ಸ್ಥಾನಗಳ ಪೈಕಿ 92ರಲ್ಲಿ ಗೆಲುವು ಸಾಧಿಸಿತ್ತು. ತ್ರಿಪುರದಲ್ಲಿ ನಾಲ್ಕು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಮೂರರಲ್ಲಿ ಗೆಲುವು ಸಾಧಿಸಿದೆ. ಮುಖ್ಯಮಂತ್ರಿ ಮಾಣಿಕ್ ಸಹಾ ಅವರು ಬರ್ದೋವುಲಿ ಕ್ಷೇತ್ರದಲ್ಲಿ 6,104 ಮತಗಳಿಂದ ಗೆಲುವು ಸಾಧಿಸಿದ್ದಾರೆ.

ರಾಜ್ಯದಲ್ಲಿ ಬೇರು ಬಿಡುವ ಕನಸು ಕಂಡಿದ್ದ ತೃಣಮೂಲ ಕಾಂಗ್ರೆಸ್‌ಗೆ ಮುಖಭಂಗವಾಗಿದ್ದು, ಅದರ ನಾಲ್ಕೂ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

ಕಾಂಗ್ರೆಸ್‌ನ ಸುದೀಪ್ ರಾಯ್ ಅವರು ಅಗರ್ತಲದಲ್ಲಿ 3,163 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಚುನಾವಣೆ ನಂತರ ರಾಜಧಾನಿಯಲ್ಲಿರುವ ಕಾಂಗ್ರೆಸ್ ಭವನದ ಎದುರು ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿಗರ ನಡುವೆ ನಡೆದ ಘರ್ಷಣೆಯಲ್ಲಿ 19 ಜನ ಗಾಯಗೊಂಡಿದ್ದಾರೆ. ಜನರನ್ನು ಚೆದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು.

ಸಿಪಿಐ (ಎಂ) ನೆಲೆಯಾಗಿದ್ದ ಜುಬರಾಜನಗರದಲ್ಲಿ ಬಿಜೆಪಿ ಅಭ್ಯರ್ಥಿ ಮಲಿನಾ ದೇಬನಾಥ್ ಅವರು 4,572 ಮತಗಳ ಗೆಲುವು ದಾಖಲಿಸಿದ್ದಾರೆ. ಸುರ್ಮಾದಲ್ಲಿ ಬಿಜೆಪಿಯ ಸ್ವಪ್ನ ದಾಸ್ ಅವರು 4,583 ಮತಗಳ ಅಂತರದ ಗೆಲುವು ಗಳಿಸಿದ್ದಾರೆ.

ಆಂಧ್ರ ಪ್ರದೇಶದ ಆತ್ಮಕುರು ಕ್ಷೇತ್ರದಲ್ಲಿ ಆಡಳಿತಾರೂಢ ವೈ.ಎಸ್.ಆರ್. ಕಾಂಗ್ರೆಸ್ ಪಕ್ಷದ ಮೇಕಪತಿ ವಿಕ್ರಮ್ ರೆಡ್ಡಿ ಅವರು 82,888 ಮತಗಳ ಭಾರೀ ಅಂತರದ ಗೆಲುವು ಸಾಧಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಕಾಂಗ್ರೆಸ್‌ನ ಶಿಲ್ಪಿ ನೇಹಾ ಟಿರ್ಕಿ ಅವರು 23,517 ಮತಗಳ ಅಂತರದಿಂದ ಗೆಲುವು ಗಳಿಸಿದ್ದಾರೆ.

# ಅಂದಿನ ಆಯಾ ರಾಮ್ ಇಂದಿನ ರೆಸಾರ್ಟ್ ರಾಜಕಾರಣ

ನವದೆಹಲಿ, ಜೂ. 26- 80ರ ದಶಕದಲ್ಲಿ ಕಂಡು ಬಂದಿದ್ದ ಆಯಾ ರಾಮ್ ಗಯಾ ರಾಮ್ ಪ್ರವೃತ್ತಿ, ಈಗ ಹೊಸ ಹಂತಕ್ಕೆ ತಲುಪಿದೆ. ಐಷಾರಾಮಿ ರೆಸಾರ್ಟ್‌ಗಳು ಈಗ ಪಕ್ಷಾಂತರಿ ರಾಜಕಾರಣಿಗಳ ಹೊಸ ಹೆಗ್ಗುರುತಂತಾಗಿವೆ.

ಮಹಾರಾಷ್ಟ್ರದ ಶಿವಸೇನೆ ಶಾಸಕರನ್ನು ಗುವಾಹತಿಯ ಐಷಾರಾಮಿ ಹೋಟೆಲ್‌ನಲ್ಲಿ ಇರಿಸಿರುವುದು ಇತ್ತೀಚಿನ ಬೆಳವಣಿಗೆಯಾಗಿದೆ. ಏಕನಾಥ ಶಿಂಧೆ ನೇತೃತ್ವದಲ್ಲಿ ಶಿವಸೇನೆ ಶಾಸಕರು ಬಂಡಾಯ ಎದ್ದಿರುವುದರಿಂದ ಮಹಾರಾಷ್ಟ್ರದ ಎಂ.ವಿ.ಎ. ಸರ್ಕಾರ ಅಲುಗಾಡುತ್ತಿದೆ.

ರೆಸಾರ್ಟ್ ರಾಜಕಾರಣ ಹೊಸದೇನೂ ಅಲ್ಲ. ಸದಾ ಕಾಲ ಯಶಸ್ವಿಯಾಗುತ್ತದೆ ಎಂದೂ ಅಲ್ಲ. ಆದರೂ, ಅಧಿಕಾರದ ಮೇಲೆ ಕಣ್ಣಿಟ್ಟಿರುವವರಿಗೆ, ರೆಸಾರ್ಟ್ ರಾಜಕಾರಣ ಆಕರ್ಷಣೀಯವಾಗಿ ಕಾಣುತ್ತಿದೆ.

ರೆಸಾರ್ಟ್ ರಾಜಕಾರಣದ ನೈತಿಕತೆಯ ಪ್ರಶ್ನೆ ಮುಂದಿಟ್ಟಿರುವ ಮಾಜಿ ಲೋಕಸಭಾ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ, ಈ ರೀತಿಯ ರೆಸಾರ್ಟ್ ರಾಜಕಾರಣ ಬೇರೆ ಯಾವುದೇ ಪ್ರಜಾಪ್ರಭುತ್ವದಲ್ಲಿ ಕಂಡು ಬರುತ್ತಿಲ್ಲ. ಇದು ನಮ್ಮ ಪ್ರಜಾಪ್ರಭುತ್ವದ ಅತ್ಯಂತ ಕುರೂಪ ಮುಖ ಎಂದಿದ್ದಾರೆ.

ಮಾಧ್ಯಮಗಳು ರೆಸಾರ್ಟ್ ರಾಜಕಾರಣದ ಹಿಂದಿನ ವಿರೂಪವನ್ನು ಬಯಲು ಮಾಡುವ ಬದಲು ಸಂಚಲನೆ ಸೃಷ್ಟಿಸಲು ಮಂದಾಗುತ್ತಿರುವುದೂ ಇದಕ್ಕೆ ಪರೋಕ್ಷ ಬೆಂಬಲ ನೀಡಿದೆ ಎಂದವರು ಹೇಳಿದ್ದಾರೆ.

ಇನ್ನೋರ್ವ ರಾಜಕೀಯ ವಿಶ್ಲೇಷಕ ರಶೀದ್ ಕಿದ್ವಾಯಿ ಸಹ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದು, ಮಧ್ಯ ಪ್ರದೇಶ, ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಪಕ್ಷಾಂತರ ನಡೆದಾಗ ಇದನ್ನು ಮಾಧ್ಯಮಗಳು ಟೀಕಿಸದೇ 'ಮಾಸ್ಟರ್ ಸ್ಟ್ರೋಕ್' ಎಂದು ಬಣ್ಣಿಸಲಾಯಿತು. ಕರ್ನಾಟಕ ಹಾಗೂ ಮಧ್ಯ ಪ್ರದೇಶಗಳಲ್ಲಿ ಪಕ್ಷಾಂತರಿಗಳು ಮತ್ತೆ ಗೆದ್ದು ಬಂದರು ಎಂದಿದ್ದಾರೆ.

ಸರ್ಕಾರ ರಚನೆಯಷ್ಟೇ ಅಲ್ಲದೇ, ರಾಜ್ಯಸಭೆ ಹಾಗೂ ವಿಧಾನ ಪರಿಷತ್‌ಗಳ ಚುನಾವಣೆ ಸಂದರ್ಭದಲ್ಲೂ ಶಾಸಕರನ್ನು ರೆಸಾರ್ಟ್‌ಗಳಿಗೆ ರವಾನಿಸಿದ ಘಟನೆಗಳು, ರಾಜಸ್ಥಾನ, ಹರಿಯಾಣ ಹಾಗೂ ಕರ್ನಾಟಕಗಳಲ್ಲಿ ನಡೆದಿವೆ.

2020ರ ಜುಲೈನಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ವಿರುದ್ಧ ಬಂಡಾಯ ಎದ್ದಿದ್ದ ಪಕ್ಷದ ನಾಯಕ ಸಚಿನ್ ಪೈಲಟ್ ಹಾಗೂ 18 ಇತರೆ ಶಾಸಕರು ಹರಿಯಾಣ ಹಾಗೂ ದೆಹಲಿಯ ಹೋಟೆಲ್‌ಗಳಿಗೆ ತೆರಳಿದ್ದರು. ಅಶೋಕ್ ಗೆಹ್ಲೋಟ್ ತಮ್ಮ ಬಣದ ಶಾಸಕರನ್ನು ಜೈಪುರದ ಫೈರ್‌ಮಾಂಟ್ ಹೋಟೆಲ್‌ಗೆ ರವಾನಿಸಿದ್ದರು. ಅಂತಿಮವಾಗಿ ಬಂಡಾಯ ಕರಗಿ ಗೆಹ್ಲೋಟ್ ವಿಶ್ವಾಸ ಮತದಲ್ಲಿ ಗೆಲುವು ಸಾಧಿಸಿದ್ದರು. ಆದರೆ, 2020ರಲ್ಲಿ ಮಧ್ಯ ಪ್ರದೇಶದಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ ತಮ್ಮ ಬೆಂಬಲಿಗ ಶಾಸಕರೊಂದಿಗೆ ಬಂಡಾಯ ಎದ್ದು ಬೆಂಗಳೂರಿನ ರೆಸಾರ್ಟ್ ಸೇರಿದಾಗ, ಕಮಲ್ ನಾಥ್ ಸರ್ಕಾರ ಪತನವಾಗಿತ್ತು.

ಕರ್ನಾಟಕದಲ್ಲಿ 2019ರ ಜುಲೈನಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಕೆಲ ಶಾಸಕರನ್ನು ಮುಂಬೈಗೆ ರವಾನಿಸಲಾಗಿತ್ತು. ಇದನ್ನು ಆಪರೇಷನ್ ಕಮಲ ಎಂದು ಬಣ್ಣಿಸಲಾಗಿತ್ತು. ಇದರಿಂದಾಗಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ - ಕಾಂಗ್ರೆಸ್ ಮೈತ್ರಿ ಸರ್ಕಾರ ಪತನವಾಗಿತ್ತು.

> **ರೆಸಾರ್ಟ್ ರಾಜಕಾರಣ ನಮ್ಮ ವ್ಯವಸ್ಥೆಯ ದೌರ್ಬಲ್ಯ ತೋರಿಸುತ್ತದೆ. ಇದು ನಮ್ಮ ಪ್ರಜಾಪ್ರಭುತ್ವದ ಅನೈತಿಕತೆ ತೋರಿಸುತ್ತದೆ. ಇದು ಪ್ರಜಾಪ್ರಭುತ್ವ ಶಿಥಿಲವಾಗುತ್ತಿ ರುವ ಸಂಕೇತ.**
> **- ಪಿ.ಡಿ.ಟಿ. ಆಚಾರಿ**

1967ರಲ್ಲಿ ಹರಿಯಾಣದ ನಾಯಕರಾಗಿದ್ದ ಗಯಾ ಲಾಲ್ ಅವರು ಕೆಲವೇ ಗಂಟೆಗಳ ಸಮಯದಲ್ಲಿ ಮೂರು ಬಾರಿ ಪಕ್ಷಾಂತರ ಮಾಡಿದ್ದರು. ಆಗಿನಿಂದ ರಾಜಕೀಯ ವಲಯದಲ್ಲಿ 'ಆಯಾ ರಾಮ್ ಗಯಾ ರಾಮ್' ಎಂಬ ಪದ ಚಲಾವಣೆಗೆ ಬಂದಿತ್ತು. ಪಕ್ಷಾಂತರ ತಡೆಯುವ ಸಲವಾಗಿ 1985ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯನ್ನೂ ಜಾರಿಗೆ ತರಲಾಗಿತ್ತು. ಆದರೆ, ಮಹಾರಾಷ್ಟ್ರದ ಪ್ರಕರಣ ನೋಡಿದಾಗ, ಪಕ್ಷಾಂತರ ಕಾಯ್ದೆ ನಿರೀಕ್ಷಿತ ಗುರಿ ಮುಟ್ಟಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

# ಪ್ರೌಢಶಾಲಾ ಶಿಕ್ಷಕರ ಸಂಘದ ಚುನಾವಣೆ

ದಾವಣಗೆರೆ, ಜೂ. 26- ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ 2022-27 ನೇ ಅವಧಿಗೆ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಸಂಘದ ಚುನಾವಣಾ ಪ್ರಕ್ರಿಯೆ ನಾಳೆ ದಿನಾಂಕ 27 ರಿಂದ ಆರಂಭಗೊಳ್ಳಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಡಿ. ಮಂಜುನಾಥಯ್ಯ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ರಾಜ್ಯ ಸಂಘ 1987 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯದಲ್ಲಿ 65 ಸಾವಿರ ಸದಸ್ಯರಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ 1714 ಸದಸ್ಯರಿದ್ದು, ಸಂಘ ಶಿಕ್ಷಕರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಾ ಬಂದಿದೆ ಎಂದರು.

ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ನಾಳೆ ದಿನಾಂಕ 27 ರಿಂದ ಜುಲೈ 9 ರವರೆಗೆ ತಾಲ್ಲೂಕು ಮಟ್ಟದ, ಜುಲೈ 12 ರಿಂದ 17 ಜಿಲ್ಲಾ ಮಟ್ಟದ ಹಾಗೂ ಜುಲೈ 18 ರಿಂದ ಜುಲೈ 24 ರವರೆಗೆ ರಾಜ್ಯಮಟ್ಟದ ಚುನಾವಣೆ ನಡೆಯಲಿದೆ ಎಂದು ತಿಳಿಸಿದರು.

ಜು. 3 ರಂದು ತಾಲ್ಲೂಕು ಸಂಘ, ಜು. 17 ರಂದು ಜಿಲ್ಲಾ ಸಂಘ, ಜು. 24 ರಂದು ರಾಜ್ಯ ಸಂಘಕ್ಕೆ ಚುನಾವಣೆ ನಡೆಯಲಿದೆ ಎಂದರು.

ಶಿಕ್ಷಕರಲ್ಲಿ ಸಂಘಟನೆ, ರಕ್ಷಣೆಗೆ ಒತ್ತು ನೀಡಲಾಗಿದ್ದು, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಚುನಾವಣಾಧಿಕಾರಿಗಳು ಕರ್ತವ್ಯ ನಿರ್ವಹಿಸಲಿದ್ದಾರೆ. ದಾವಣಗೆರೆ ಉತ್ತರ ಮತ್ತು ದಕ್ಷಿಣ, ಹೊನ್ನಾಳಿ, ನ್ಯಾಮತಿ, ಚನ್ನಗಿರಿ, ಹರಿಹರ, ಜಗಳೂರು ತಾಲ್ಲೂಕುಗಳಿಗೆ ಒಟ್ಟು ಏಳು ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗುವುದು. ಸರ್ಕಾರದಿಂದ ಮಾನ್ಯತೆ ಪಡೆದ ಸಂಘ ನಮ್ಮದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಟಿ. ಸುರೇಶ್, ಬಿ. ಮುಬಾರಕ್ ಅಲಿ, ದ್ವಾರಕೀಶ್ ನಾಯಕ್, ಈಶಪ್ಪ ಬೂದಿಹಾಳ್, ಎಲ್. ಗಂಗಾಧರ್ ಉಪಸ್ಥಿತರಿದ್ದರು.

# ಎಸ್‌ಡಿಪಿಐನಿಂದ ಬಿಜೆಪಿ ಎದುರಿಸಲು ಸಾಧ್ಯ

(1ನೇ ಪುಟದಿಂದ) ಬೇಕಾಗುತ್ತದೆ. ಈ ಹಣವನ್ನು ಶಿಕ್ಷಣ ಸಚಿವರಿಂದ ಪಡೆಯಬೇಕೆಂದು ಆಗ್ರಹಿಸಿದರು.

ರಾಜ್ಯ ಕಾರ್ಯದರ್ಶಿ ಅಫ್ಸರ್ ಕೊಡ್ಲಿಪೇಟೆ ಮಾತನಾಡಿ, ದೇಶದಲ್ಲಿಂದು ಅಂಬೇಡ್ಕರ್ ಹಾಕಿಕೊಟ್ಟ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದ ಆಡಳಿತ ನಡೆಯುತ್ತಿದೆ. ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದರೂ ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಮಾಯಕರನ್ನು ಹುಬ್ಬಳ್ಳಿಯ ಗಲಭೆ ಹೆಸರಿನಲ್ಲಿ ಜೈಲಿಗೆ ಹಾಕಲಾಯಿತು. ಅಂತಹ ಅಮಾಯಕರ ಪರವಾಗಿ ಯಾವ ಪಕ್ಷಗಳೂ ನಿಲ್ಲಲಿಲ್ಲ. ಎಸ್‌ಡಿಪಿಐ ಅವರ ಪರವಾಗಿ ನಿಂತಿತ್ತು. ಈಗಲೂ ಕೂಡ ನಿಂತಿದೆ ಎಂದರು.

ಹಿಜಾಬ್ ಹಿಂದೆ ಎಸ್‌ಡಿಪಿಐ ಇದೆ ಎಂದು ಹೇಳುತ್ತಿದ್ದಾರೆ. ಹಿಜಾಬ್ ವಿಷಯದಲ್ಲಿ ನಾವು ಮುಂದೆಯೇ ಇದ್ದೇವೆ. ಧಾರ್ಮಿಕ ಹಕ್ಕುಗಳ ಪರವಾಗಿ ನಮ್ಮ ಹೋರಾಟ ಯಾವಾಗಲೂ ಇರುತ್ತದೆ. ಆದ್ದರಿಂದ ದೇಶದಲ್ಲಿಂದು ಕೋಮು ವಾದ, ಹಿಂದುತ್ವವಾದ, ಸೋ ಕಾಲ್ಡ್ ಸೆಕ್ಯೂಲರಿ ಸಂಗಳನ್ನು ಸೋಲಿಸಬೇಕು ಎಂದು ಕರೆ ನೀಡಿದರು.


ಭಾಸ್ಕರ್ ಪ್ರಸಾದ್ ಮಾತನಾಡಿ, ಅಲ್ಪ ಸಂಖ್ಯಾತರ ಪರವಾಗಿ ವಿಧಾನಸಭೆಯಲ್ಲಿ ಧ್ವನಿ ಎತ್ತಲು ಎಸ್‌ಡಿಪಿಐ ಅವಶ್ಯಕತೆ ಇದೆ. ಸಿದ್ದರಾಮಯ್ಯ ಅಲ್ಪ ಸಂಖ್ಯಾತರ ಪರವಾಗಿ ಧ್ವನಿ ಎತ್ತಿದ್ದು ತೀರಾ ಕಡಿಮೆ. ಹಿಜಾಬ್, ಹಲಾಲ್ ಕಟ್ ಮೊದಲಾದ ಸಂದರ್ಭಗಳಲ್ಲಿ ಅವರು ನಮ್ಮ ಪರವಾಗಿ ಧ್ವನಿ ಎತ್ತಲಿಲ್ಲ. ನಾವು ಕೂಡ ಬಿಜೆಪಿಗೆ ಹೋದರೆ ಛಲವಾದಿ ನಾರಾಯಣ ಸ್ವಾಮಿ ತರ ಚಡ್ಡಿ ಹೋರುವ ಕೆಲಸ ಮಾಡಬೇಕಾಗುತ್ತದೆ ಎಂದರು.

ಸಾನಿಧ್ಯ ವಹಿಸಿದ್ದ ಆದಿ ಜಾಂಬವ ಮಠದ ಶ್ರೀ ಷಡಕ್ಷರ ಮುನಿ ಸ್ವಾಮೀಜಿ ಮಾತನಾಡಿ, ಭಯ ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಸಂಘಟನೆಯ ಧ್ವನಿ ಮತ್ತಷ್ಟು ಗಟ್ಟಿಯಾಗಬೇಕಾದ ಅಗತ್ಯವಿದೆ ಎಂದರು.

ಸಮಾವೇಶದಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷೆ ಸೈಯಿದಾ ಸಾದಿಯಾ, ಅಶ್ರಫ ಮಾಚಾರ್, ಅಬ್ದುಲ್ ರಹಿಂ, ಸಲೀಂಖಾನ್ ಶಿವಮೊಗ್ಗ, ಇಸ್ಮಾಯಿಲ್ ಜಬೀವುಲ್ಲಾ, ಶಬಾನಾ ಬಾನು ಮತ್ತು ಅನೇಕ ಮುಖಂಡರು ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಬಂದ 5 ಸಾವಿರಕ್ಕೂ ಅಧಿಕ ಜನರು ಭಾಗವಹಿಸಿದ್ದರು.

# ಹರಪನಹಳ್ಳಿ ಬೀಚಿ ವಂಶದ ಕುಡಿ ರಾಜಕೀಯಕ್ಕೆ

ಹರಪನಹಳ್ಳಿ, ಜೂ.26- ಮುಂಬರುವ ವಿಧಾನಸಭಾ ಚುನಾವಣೆಗೆ ಹರಪನಹಳ್ಳಿ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಪಟ್ಟಣದ ಮಠದ ಕೇರಿಯ ಬೀಚಿ ವಂಶದ ಯುವಕ ಸುಮಂತ ರಾಯಸಂ ತಿಳಿಸಿದ್ದಾರೆ.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಂದು ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಾನು ಸ್ಥಳೀಯನಾಗಿದ್ದು, ಕಷ್ಟದ ದಿನಗಳಲ್ಲಿ ವಿದ್ಯಾಭ್ಯಾಸ ಮುಗಿಸಿ, ಉದ್ಯೋಗ ಅರಸಿ ಬೆಂಗಳೂರಿನಲ್ಲಿ ಲೆಕ್ಕಪರಿಶೋಧಕನಾಗಿ ಕೆಲಸ ನಿರ್ವಹಿಸಿದ್ದೇನೆ ಎಂದರು.

ಮೂಲತಃ ಹರಪನಹಳ್ಳಿಯವರಾಗಿದ್ದು, ತಂದೆ-ತಾಯಿಗಳ ಪರಿಶ್ರಮ ಹಾಗೂ ಕಷ್ಟಗಳಿಂದ ಬೆಳೆದು ಇತರರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಲು ಅರ್ಹತೆ ಇರುವುದು ಸ್ಥಳೀಯರಿಗೆ ಮಾತ್ರ, ಹಾಗಾಗಿ ತಾಲ್ಲೂಕಿನ ಜ್ವಲಂತ ಸಮಸ್ಯೆಗಳನ್ನು ಈಡೇರಿಸಲು ಯುವಕರು ನನಗೆ ಬೆನ್ನೆಲುಬಾಗಿ ನಿಂತಿದ್ದು, ಪ್ರತಿಯೊಬ್ಬ ಮತದಾರರು ಬೆಂಬಲ ನೀಡಿದರೆ, ಹರಪನಹಳ್ಳಿಯನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವ ಗುರಿ ಇದೆ ಎಂದು ಹೇಳಿದರು.

ಹರಪನಹಳ್ಳಿ ತಾಲ್ಲೂಕು ಕಳೆದ 30 ವರ್ಷಗಳಿಂದ ಯಾವುದೇ ಅಭಿವೃದ್ಧಿ ಹೊಂದದೆ ಹಿಂದುಳಿದ ತಾಲ್ಲೂಕು ಆಗಿ ಉಳಿದಿರುವುದು ಶೋಚನಿಯ ಸಂಗತಿಯಾಗಿದೆ. ಈಗಾಗಲೇ ತಾಲ್ಲೂಕಿನ 62 ಗ್ರಾಮಗಳಿಗೆ ಸಂಚರಿಸಿ ಅಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಿ, ಸಮೀಕ್ಷೆ ನಡೆಸಿದ ವೇಳೆ ಸರಿಯಾದ ರಸ್ತೆ, ಚರಂಡಿ, ಶಾಲಾ ಕೊಠಡಿ, ಗ್ರಂಥಾಲಯ, ಆಸ್ಪತ್ರೆ, ರೈತರಿಗೆ ಗೊಬ್ಬರ, ಬೀಜ, ಮಹಿಳೆಯರಿಗೆ, ಯುವಕರಿಗೆ ಸ್ವಯಂ ಉದ್ಯೋಗ ಇಲ್ಲದಿರುವುದು ಸೇರಿದಂತೆ ಅನೇಕ ಸಮಸ್ಯೆಗಳು ಕಂಡುಬಂದಿದ್ದು ಇವುಗಳನ್ನು ಸರಿಪಡಿಸಲು ಪಣತೊಟ್ಟಿದ್ದೇನೆ ಎಂದರು.

ತಾಲ್ಲೂಕಿನಲ್ಲಿ ನಿರುದ್ಯೋಗ ಸಮಸ್ಯೆ ಇದ್ದು, ಇದನ್ನು ಹೋಗಲಾಡಿಸಲು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾಗಿ ತಮ್ಮ ಇಂಗಿತ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪಾಲಾಕ್ಷಪ್ಪ, ಸಂಜೀವ್, ವಾಸೀಂ, ಹನುಮಂತ, ವರುಣ್, ವಸಂತಕುಮಾರ, ಪ್ರದೀಪ್ ಸೇರಿದಂತೆ ಇತರರು ಇದ್ದರು.

# ಜಿ. ಬೇವಿನಹಳ್ಳಿಯಲ್ಲಿ ವ್ಹೀಲ್ ಚೇರ್ ವಿತರಣೆ



ಮಲೇಬೆನ್ನೂರು, ಜೂ. 24- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜನಮಂಗಲ ಕಾರ್ಯಕ್ರಮದಡಿ ಜಿ. ಬೇವಿನಹಳ್ಳಿ ಗ್ರಾಮದ ಪರಶುರಾಮ್ ಅವರಿಗೆ ವ್ಹೀಲ್ ಚೇರ್ ವಿತರಣೆಯನ್ನು ಜಿಗಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ರೇಣುಕಮ್ಮ, ಯೋಜನಾಧಿಕಾರಿಗಳಾದ ವಸಂತ ದೇವಾಡಿಗ ನೀಡಿದರು. ಗ್ರಾ.ಪಂ ಸದಸ್ಯರಾದ ದೇವರಾಜ್, ಆಶಾ ಕಾರ್ಯಕರ್ತರಾದ ರಾಧಮ್ಮ, ವಲಯದ ಮೇಲ್ವಿಚಾರಕರಾದ ಪದ್ಮಾವತಿ, ಸೇವಾ ಪ್ರತಿನಿಧಿ ನಾಗಮ್ಮ ಈ ವೇಳೆ ಹಾಜರಿದ್ದರು.

# ಟಿವಿಎಸ್ ಎನ್‌ಟಿಓಆರ್‌ಕ್ಯೂಎಕ್ಸ್‌ಟಿ 125 ದ್ವಿಚಕ್ರ ವಾಹನ ಬಿಡುಗಡೆ



ದಾವಣಗೆರೆ, ಜೂ. 26 - ನಗರದ ಮಹಾ ಟಿವಿಎಸ್ ಶೋ ರೂಂ ನಲ್ಲಿ ಟಿವಿಎಸ್ ಎನ್‌ಟಿಓಆರ್‌ಕ್ಯೂಎಕ್ಸ್‌ಟಿ 125 ದ್ವಿಚಕ್ರ ವಾಹನವನ್ನು ಶುಕ್ರವಾರ ಮಹಾರಾಜ ಸೋಪ್ಸ್ ಇಂಡಸ್ಟ್ರೀಸ್‌ನ ಛೇರ್ಮನ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಎಂ.ಇ. ರವಿರಾಜ್, ಶಶಿ ಎಜುಕೇಷನ್ ಟ್ರಸ್ಟ್, ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ, ಲಲಿತಾ ಪಿಯು ಕಾಲೇಜಿನ ಅಧ್ಯಕ್ಷರಾದ ಶಶಿಕಲಾ ಇ.ಆರ್. ಅವರು ಉದ್ಘಾಟಿಸಿದರು.

# ಜಿಗಳಿಯಲ್ಲಿ ವಿಶ್ವ ಯೋಗ ದಿನಾಚರಣೆ



ಮಲೇಬೆನ್ನೂರು, ಜೂ. 26- ಜಿಗಳಿ ಗ್ರಾಮದ ಸ.ಹಿ.ಪ್ರಾ. ಶಾಲೆಯಲ್ಲಿ ಗ್ರಾ.ಪಂ. ಸಹಯೋಗದೊಂದಿಗೆ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಣುಕಮ್ಮ ಮಡಿವಾಳರ ರಂಗಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಗ್ರಾ.ಪಂ. ಪಿಡಿಓ ಉಮೇಶ್ ಮಾತನಾಡಿ, ಯೋಗದ ಮಹತ್ವ ತಿಳಿಸಿಕೊಟ್ಟರು. ಶಿಕ್ಷಕರಾದ ಗುಡ್ಡಪ್ಪ, ನಾಗೇಶ್, ಲೋಕೇಶ್, ಲಿಂಗರಾಜ್, ಮಲ್ಲಿಕಾರ್ಜುನ್ ಅವರು ಯೋಗ ಕುರಿತು ಮಕ್ಕಳಿಗೆ ಹೇಳಿಕೊಟ್ಟರು.

ಗ್ರಾ.ಪಂ. ಸದಸ್ಯರಾದ ಕೆ.ಜಿ. ಬಸವರಾಜ್, ಜಿ. ಬೇವಿನಹಳ್ಳಿಯ ಕೆ.ಜಿ. ಮಹಾಂತೇಶ್, ಶ್ರೀಮತಿ ಜಯಮ್ಮ ರಂಗನಾಥ್, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಪತ್ರಕರ್ತ ಪ್ರಕಾಶ್, ಎಸ್‌ಡಿಎಂಸಿ ಸದಸ್ಯರಾದ ವಿಜಯಭಾಸ್ಕರ್, ಎ.ಕೆ. ಪ್ರಭಾಕರ್ ಮತ್ತು ಗ್ರಾ.ಪಂ.ನ ದಾನಪ್ಪ, ಮೌನೇಶ್ ಮತ್ತು ಶಿಕ್ಷಕರಾದ ಜಯಶ್ರೀ, ಕುಸುಮ, ವೀಣಾ, ದೀಪಾ ಭಾಗವಹಿಸಿದ್ದರು.

ನಂತರ ದೈಹಿಕ ಶಿಕ್ಷಕ ಶ್ರೀನಿವಾಸ್ ರೆಡ್ಡಿ ಯೋಗಾಭ್ಯಾಸ ಮಾಡಿಸಿದರು.

## ಸಿದ್ಧಗಂಗಾ ಮಕ್ಕಳ ಲೋಕದಲ್ಲಿ ಉಚಿತ ಸಾಂಸ್ಕೃತಿಕ ಶಿಕ್ಷಣ

ದಾವಣಗೆರೆ,ಜೂ.26- ನಿಟುವಳ್ಳಿಯ 60 ಅಡಿ ರಸ್ತೆ ಹತ್ತಿರದ ಶ್ರೀ ಮಾರುತಿ ಮಂದಿರದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ 4ರಿಂದ 6ರವರೆಗೆ ಮಕ್ಕಳಿಗೆ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ವಚನ ಸಂಗೀತ ಮತ್ತು ಕವಿಗಳ ಹಾಡುಗಳನ್ನು ಕಳೆದ 14 ವರ್ಷಗಳಿಂದ ಕಲಿಸಲಾಗುತ್ತಿದೆ ಎಂದು ಮಕ್ಕಳ ಲೋಕದ ಸಂಸ್ಥಾಪಕ, ಹಿರಿಯ ಸಾಹಿತಿ ಕೆ.ಎನ್. ಸ್ವಾಮಿ ತಿಳಿಸಿದ್ದಾರೆ.

ಶಾಸ್ತ್ರೀಯ ಸಂಗೀತವನ್ನು ಜನಪದ ಅಕಾಡೆಮಿ ಸದಸ್ಯರಾದ ಸಿ.ಕೆ.ರುದ್ರಾಕ್ಷಿ ಬಾಯಿ, ವಚನ ಸಂಗೀತವನ್ನು ಬಸವನ ಬಾಗೇವಾಡಿ ಸಂಗೀತ ಶಾಲೆಯ ಪ್ರಾಚಾರ್ಯ ರುಕ್ಮಾಬಾಯಿ ಕೊಂತಿಕಲ್, ಭರತ ನಾಟ್ಯವನ್ನು ಶ್ರೀಮತಿ ಅನನ್ಯ ಹೇಳಿಕೊಡುತ್ತಾರೆ.

ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಚಂದ್ರಶೇಖರ ಅಡಿಗರು, ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷರಾದ ಹಿರಿಯ ಕವಯತ್ರಿ ಶ್ರೀಮತಿ ವೀಣಾ ಕೃಷ್ಣಮೂರ್ತಿ ಸಹಕಾರ. ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾರ್ಗದರ್ಶನದಲ್ಲಿ ಸಂಸ್ಥೆ ಬಡ ಮಕ್ಕಳಿಗೆ ಆಶಾಕಿರಣವಾಗಿದೆ ಎಂದು ಸಾಹಿತಿ ಕೆ.ಎನ್.ಸ್ವಾಮಿ ತಿಳಿಸಿದ್ದಾರೆ.

# ಕಾರ್ಯನಿರತ ಪತ್ರಕರ್ತರ ಸಂಘದ ತಾ. ಘಟಕಗಳಲ್ಲಿ ಚುನಾವಣೆ

(1ನೇ ಪುಟದಿಂದ) ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್ ಚುನಾವಣೆಗಳ ಉಸ್ತುವಾರಿ ವಹಿಸಿದ್ದರು.



**ಹೆಚ್.ಎನ್ ಕೀರ್ತಿಕುಮಾರ್**
ಪ್ರ.ಕಾರ್ಯದರ್ಶಿ, ಜಗಳೂರು



**ಸುಧಾಕರ್ ಹೆಚ್.**
ಉಪಾಧ್ಯಕ್ಷರು, ಜಗಳೂರು



**ಎಂ. ಲೋಕೇಶ್**
ಪ್ರ.ಕಾರ್ಯದರ್ಶಿ, ಜಗಳೂರು



**ಪ್ರಸನ್ನ ಎಂ.**
ಪ್ರ.ಕಾರ್ಯದರ್ಶಿ, ಚನ್ನಗಿರಿ

**ತಾಲ್ಲೂಕುಗಳ ವಿವರ :**

**ಹರಿಹರ** : ಈ ತಾಲ್ಲೂಕಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ನಾಲ್ವರ ಪೈಕಿ ಶಾಂಭವಿ ಅವರು 21 ಮತಗಳನ್ನು ಪಡೆದು ಚುನಾಯಿತಗೊಂಡರು. ಕೆ. ಜೈಮುನಿ 6, ಮಂಜುನಾಥ ಪೂಜಾರಿ 2, ಬಿ. ವಾಸುದೇವ 1 ಮತವನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷರಾಗಿ ಹೆಚ್. ಸುಧಾಕರ್ 20 ಮತಗಳನ್ನು ಪಡೆದು ಜಯ ಗಳಿಸಿದರು. ಇವರ ಪ್ರತಿಸ್ಪರ್ಧಿಯಾಗಿದ್ದ ಮಂಜುನಾಥ ಮೈಲಾಳ್ 12 ಮತಗಳನ್ನು ಪಡೆದರೆ, ಪಂಚಾಕ್ಷರಿ ಪಡೆದ ಮತ ಶೂನ್ಯವಾಗಿತ್ತು. ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಸಿ. ಕೀರ್ತಿಕುಮಾರ್ ಆಯ್ಕೆಯಾಗಿದ್ದಾರೆ. ಅವರು 22 ಮತಗಳನ್ನು ಪಡೆದರೆ, ಅವರ ವಿರುದ್ಧ ಸ್ಪರ್ಧಿಸಿದ್ದ ಹೆಚ್. ಮಂಜಾನಾಯ್ಕ 6, ಎಂ.ಚಿದಾನಂದ 3 ಮತಗಳನ್ನು ಪಡೆದರು.

ಕಾರ್ಯದರ್ಶಿಯಾಗಿ ಆರ್. ಮಂಜುನಾಥ್, ಖಜಾಂಚಿಯಾಗಿ ಬಿ.ಎಂ. ಚಂದ್ರಶೇಖರ್, ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ವೈ. ನಾಗರಾಜ್, ಹೆಚ್. ಶಿವಪ್ಪ, ಮೆಹಬೂಬ್ ಅಲಿ ಅದ್ವಾನಿ, ಎಂ. ಸಂತೋಷ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಹೊನ್ನಾಳಿ** : ಹೊನ್ನಾಳಿ ತಾಲ್ಲೂಕಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಇಬ್ಬರಲ್ಲಿ ಕೆ.ಎಸ್. ಯೋಗೇಶ್ 5 ಮತಗಳನ್ನು ಪಡೆದು ಚುನಾಯಿತಗೊಂಡರು. ಅವರ ಪ್ರತಿಸ್ಪರ್ಧಿ ಟಿ. ಶ್ರೀನಿವಾಸ್ 4 ಮತಗಳನ್ನು ಪಡೆದು ಪರಾಭವಗೊಂಡರು.

**ಚನ್ನಗಿರಿ** : ಈ ತಾಲ್ಲೂಕಿನಲ್ಲೂ ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದರು. ಕೆ.ಎಸ್. ವೀರೇಶ್ ಪ್ರಸಾದ್ 14 ಮತಗಳನ್ನು ಪಡೆದು ಜಯ ಗಳಿಸಿದರೆ, ಟಿ.ಎನ್. ಜಗದೀಶ್ 7 ಮತಗಳನ್ನು ಪಡೆದು ಪರಾಜಿತರಾದರು.

ಪ್ರಧಾನ ಕಾರ್ಯದರ್ಶಿಯಾಗಿ ಎಂ. ಪ್ರಸನ್ನ, ಕಾರ್ಯದರ್ಶಿಯಾಗಿ ಸಿ.ಎಸ್. ಶಿವಲಿಂಗ ಸ್ವಾಮಿ, ಖಜಾಂಚಿಯಾಗಿ ಸಿ.ಎಸ್. ಶಶೀಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಜಗಳೂರು** : ತಾಲ್ಲೂಕಿನ ಹಾಲಿ ಅಧ್ಯಕ್ಷ ಜಿ.ಎಸ್. ಚಿದಾನಂದ್ ಅಧ್ಯಕ್ಷರಾಗಿ ಮತ್ತೆ ಆಯ್ಕೆಯಾಗಿದ್ದಾರೆ. ಅವರಲ್ಲದೇ, ಪ್ರಧಾನ ಕಾರ್ಯದರ್ಶಿಯಾಗಿ ಲೋಕೇಶ್ ಎಂ. ಐಹೊಳೆ, ಕಾರ್ಯದರ್ಶಿಯಾಗಿ ಜೆ.ಓ. ರವಿಕುಮಾರ್, ಖಜಾಂಚಿಯಾಗಿ ಕೆ.ಎಂ. ಜಗದೀಶ್, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿ ಓ. ಮಂಜುನಾಥ್, ಎಸ್. ಧನ್ಯ ಕುಮಾರ್, ಎಂ. ರಾಜಪ್ಪ, ಹೆಚ್. ಬಾಬು ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಅಭಿನಂದನೆ** : ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ರಾಜ್ಯ ಘಟಕದ ಸದಸ್ಯ ಕೆ ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಕೊಟ್ರೇಶ್ ಅಣಬೂರ್‌ಮಠ ಅವರು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದ್ದಾರೆ.

## ಬಿಐಇಟಿಯಲ್ಲಿ ಇಂದು ವಿಶ್ವ ಪರಿಸರ ದಿನ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ವಿಶ್ವ ಪರಿಸರ ದಿನಾಚರಣೆ ನಡೆಯಲಿದೆ.

ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ (ಇಂಡಿಯ) ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷ ಎಂ. ಲಕ್ಷ್ಮಣ, ಕಾರ್ಯದರ್ಶಿ ಡಾ. ಎನ್.ಟಿ. ರಂಗಾರೆಡ್ಡಿ ಮತ್ತು ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸುವರು. ಡಾ. ಜಿ.ಪಿ. ದೇಸಾಯಿ, ಕಾರ್ಯದರ್ಶಿ ಡಾ. ಎಸ್. ಸುರೇಶ್ ಉಪಸ್ಥಿತರಿರುವರು ಎಂದು ಸಾರ್ವಜನಿಕ ಸಂಪರ್ಕ ಡೀನ್ ಜಿ.ಪಿ. ದೇಸಾಯಿ ತಿಳಿಸಿದ್ದಾರೆ.

## ಶ್ರೀ ಕ್ಷೇತ್ರದ ಕ್ಯಾಟರಿಂಗ್ ಮಾಲೀಕರಾದ ರುದ್ರಯ್ಯ (ಸ್ವಾಮಿ) ನಿಧನ



ದಾವಣಗೆರೆ ನಿಟ್ಟುವಳ್ಳಿ ಮೌನೇಶ್ವರ ಬಡಾವಣೆ ವಾಸಿ
ಶ್ರೀ ಕ್ಷೇತ್ರದ ಟಿಫನ್ ಸೆಂಟರ್ ಮತ್ತು ಕ್ಯಾಟರಿಂಗ್‌ನ ಮಾಲೀಕರಾದ

**ರುದ್ರಯ್ಯ (ಸ್ವಾಮಿ)**

ಇವರು, ದಿನಾಂಕ 26.6.2022ರ ಭಾನುವಾರ ಬೆಳಿಗ್ಗೆ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.6.2022ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬವರ್ಗ**


**99809-79703, 94830-61416**

## ಶಾಸಕರಿಗೆ ಕೇಂದ್ರದಿಂದ ಭದ್ರತೆ

(1ನೇ ಪುಟದಿಂದ) ಇತರೆ 10 ಜನರಿಗೆ ಭದ್ರತೆ ಕಲ್ಪಿಸಲಾಗಿದೆ.

ಮಹಾರಾಷ್ಟ್ರದಲ್ಲಿರುವ ಅವರ ಕುಟುಂಬದವರಿಗೂ ಸಹ ಭದ್ರತೆ ಒದಗಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಪ್ರಸಕ್ತ ಉಂಟಾಗಿರುವ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅವರಿಗೆ ಅಪಾಯ ಇರುವ ಕಾರಣದಿಂದ ಭದ್ರತೆ ಕಲ್ಪಿಸಲಾಗಿದೆ.

## ಸಾವಯವ ಕೃಷಿ ಸಾಧಕ ಶಿವಪ್ಪ ಎಸ್. ಸಿದ್ಧಮಲ್ಲಣ್ಣನವರ್ ನಿಧನ



ಹೊನ್ನಾಳಿ, ಜೂ. 26- ತಾಲ್ಲೂಕಿನ ಹೆಚ್. ಗೋಪಗೊಂಡನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಶಿವಪ್ಪ ಎಸ್. ಸಿದ್ಧಮಲ್ಲಣ್ಣನವರ್ (74) ಅವರು ಶನಿವಾರ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 12 ಗಂಟೆಗೆ ಹೆಚ್. ಗೋಪಗೊಂಡನಹಳ್ಳಿಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಾವಯವ ಕೃಷಿಯಲ್ಲಿ ಸಾಧನೆಗೈದ ಶಿವಪ್ಪ ಎಸ್. ಸಿದ್ಧಮಲ್ಲಣ್ಣನವರ್ ಅವರಿಗೆ 2014-15 ರಲ್ಲಿ ಶ್ರೇಷ್ಠ ಕೃಷಿಕ ಪ್ರಶಸ್ತಿ ಲಭಿಸಿರುವುದನ್ನು ಸ್ಮರಿಸಬಹುದು.

# ಕ್ರೀಡೆಯ ಜೊತೆ ಜೀವನವೂ ಉತ್ತಮವಾಗಲಿ

### ಕ್ರಿಕೆಟ್ ಕ್ರೀಡಾಕೂಟದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್

ಹರಿಹರ, ಜೂ. 26 - ಕ್ರೀಡಾಪಟುಗಳು ಕ್ರೀಡೆಯ ಜೊತೆಗೆ, ತಮ್ಮ ನಿತ್ಯದ ಬದುಕೂ ಸಹ ಚೆನ್ನಾಗಿ ನಡೆಯುವಂತೆ ನೋಡಿಕೊಂಡು ಉತ್ತಮ ಜೀವನ ನಡೆಸುವಂತೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಹೇಳಿದರು.




ನಗರದ ಗಾಂಧಿ ಮೈದಾನದಲ್ಲಿ ಹರಿಹರ ಸ್ಟ್ರೇಕರ್ಸ್ ಮತ್ತು ಫ್ರೆಂಡ್ಸ್ ಕ್ರಿಕೆಟ್ ತಂಡದ ನೇತೃತ್ವದಲ್ಲಿ ನಡೆದ ಲೀಗ್ ಕ್ರಿಕೆಟ್ ಟೂರ್ನಮೆಂಟ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕ್ರಿಕೆಟ್ ಗೆ ಮಹತ್ವ ನೀಡಿದಂತೆ ವಿದ್ಯೆಗೆ ಮತ್ತು ತಮ್ಮ ಬದುಕಿನ ಏಳಿಗೆಗಾಗಿ ಶ್ರಮಿಸಿ, ನಾಡಿನ ಉತ್ತಮ ಪ್ರಜೆಗಳಾಗಿ ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ಮುಖಂಡ ಗಣೇಶ ದುರ್ಗದ ವಕೀಲರು ಮಾತನಾಡಿ, ಕ್ರೀಡೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು. ಕ್ರೀಡೆಯಲ್ಲಿ ತೊಡಗಿಸಿಕೊಂಡರೆ ದೇಹವನ್ನು ಸದೃಢವಾಗಿ ಇಟ್ಟುಕೊಳ್ಳಬಹುದು ಎಂದು ಹೇಳಿದರು.

ಅತಾವುಲ್ಲಾ ಮಾತನಾಡಿ, ಗೆಲುವು ಮತ್ತು ಸೋಲನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾ ಸ್ಫೂರ್ತಿಯನ್ನು ಎತ್ತಿ ಹಿಡಿಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ರಮೇಶ್, ಮಲ್ಲೇಶ್, ಮಹೇಶ್ ಪೂಜಾರ್, ಶಾಂತರಾಜ್, ಎಂ.ಚಿದಾನಂದ ಕಂಚಿಕೇರಿ, ಸಂತೋಷ ಗುಡಿಮನಿ, ಅಣ್ಣಪ್ಪ ಅಜ್ಜೇರ್, ಅಜೇಯ್ ಡಲ್ಲಾ, ವಿಶ್ವ, ಅಬ್ಬು, ಗಾಂಧಿ ಆಕಾಶ, ಇಮ್ತಿಯಾಜ್, ಆಕಾಶ್ ಭೂತೆ ಉಪಸ್ಥಿತರಿದ್ದರು.

ಈ ವೇಳೆ ನಿಕ್ಕೇಶ್ ಬೆಸ್ಟ್ ಕ್ಯಾಚರ್, ಹರೀಶ್, ಬೆಸ್ಟ್ ಬ್ಯಾಟಿಂಗ್, ಬೆಸ್ಟ್ ಬೌಲರ್ ಚಂದೂ, ಬೆಸ್ಟ್ ಆಲ್ ರೌಂಡರ್ ಹರ್ಷ, ಶಿಸ್ತು ತಂಡ ಗಾಂಧಿ ಸಿ.ಸಿ. ತಂಡಕ್ಕೆ, ಪ್ರಶಸ್ತಿ ವಿಜೇತರಿಗೆ ವಿಶೇಷ ಬಹುಮಾನ ನೀಡಲಾಯಿತು.

# ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸಿ: ಡಾ. ಸ್ಮಿತಾ

ದಾವಣಗೆರೆ, ಜೂ. 26- ಮಕ್ಕಳು ಪಠ್ಯದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳಲ್ಲಿಯೂ ಕೂಡಾ ಆಸಕ್ತಿ ವಹಿಸಬೇಕು ಎಂದು ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯದ ಡಾ. ಸ್ಮಿತಾ ಹೇಳಿದರು.

ನಗರದ ಪಿ.ಜೆ. ಬಡಾವಣೆಯಲ್ಲಿರುವ ಸೇಂಟ್ ಪಾಲ್ಸ್ ಶಾಲೆಯಲ್ಲಿ ಸಂತ ಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ಅಂತರ ಶಾಲಾ ಮಕ್ಕಳ ನೃತ್ಯ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ನಿಮ್ಮ ಬುದ್ಧಿ ಶಕ್ತಿ ಬೆಳೆಯಲು ಸಹಕಾರಿಯಾಗಲಿದೆ ಎಂದರು.



ಶಾಲೆಯ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿ ಮಾತನಾಡಿ, ನಿಮ್ಮಲ್ಲಡಗಿರುವ ಸುಪ್ತ ಪ್ರತಿಭೆಯನ್ನು ಹೊರಹಾಕಲು ಇದು ಸೂಕ್ತ ವೇದಿಕೆಯಾಗಿದೆ. ಅಲ್ಲದೇ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ನಿಮ್ಮಲ್ಲಿ ಇತರೆ ಶಾಲಾ ಮಕ್ಕಳೊಂದಿಗೆ ಸ್ನೇಹ ಬಾಂಧವ್ಯ ಬೆಳೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನೂಪುರ ಕಲಾ ಸಂಸ್ಥೆಯ ಭರತನಾಟ್ಯ ಕಲಾವಿದೆ ಬೃಂದಾ ಶ್ರೀನಿವಾಸ, ನಿವೃತ್ತ ಶಿಕ್ಷಕಿ ನ್ಯಾನ್ಸಿ ಫರ್ನಾಂಡೀಸ್, ಜೋಯಾಲುಕಾಸ್‌ನ ಪ್ರಮೋದ, ಶಾಲಾ ಆಡಳಿತ ಮಂಡಳಿಯ ಸಿಸ್ಟರ್ ಸಮಂತ, ಸಿಸ್ಟರ್ ಆಲ್ಬಿನ, ಸಿಸ್ಟರ್ ವಿಜೇತ, ಸಿಸ್ಟರ್ ಅನೀಸ್, ಸಿಸ್ಟರ್ ಫ್ರಾನ್ಸಲೀನ್ ಹಾಗೂ ವಿವಿಧ ವಿಭಾಗಗಳ ಶಿಕ್ಷಕರುಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆನಂದಪ್ಪ ಕರೆ



ದಾವಣಗೆರೆ, ಜೂ. 26- ಮಕ್ಕಳ ಭವಿಷ್ಯ ರೂಪಿಸುವತ್ತ ಪೋಷಕರ ಚಿತ್ತ ಇರಲಿ. ದುಶ್ಚಟಗಳಿಂದ ದೂರವಿದ್ದು, ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವಂತೆ ಕೊಳಚೆ ನಿರ್ಮೂಲನಾ ಮಂಡಳಿಯ ನಿವೃತ್ತ ಇಂಜಿನಿಯರ್ ಎಸ್. ಎಲ್. ಆನಂದಪ್ಪ ಕರೆ ನೀಡಿದರು.

ಸ್ಲಂ ಜನಾಂದೋಲನ -ಕರ್ನಾಟಕ ಹಾಗೂ ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ವತಿಯಿಂದ ನಗರದ ರೋಟರಿ ಬಾಲ ಭವನದಲ್ಲಿ 2021-22 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸ್ಲಂನ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಶೈಕ್ಷಣಿಕ ಮಾರ್ಗದರ್ಶನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊಳಗೇರಿಯ ಜನರಿಗೆ ಸರಿಯಾದ ಶಿಕ್ಷಣ ಸಿಗದೇ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಬಾಲ್ಯದಲ್ಲಿಯೇ ಮಕ್ಕಳನ್ನು ಜೀತಕ್ಕೆ ಕಳುಹಿಸಿ, ವಿದ್ಯಾಭ್ಯಾಸ ಕೊಡಿಸುವಲ್ಲಿ ಹಿಂದೇಟು ಹಾಕುತ್ತಿದ್ದಾರೆ ಎಂದರು.

ಎಲ್ಲಾ ಕ್ಷೇತ್ರಗಳಲ್ಲೂ ಮಧ್ಯವರ್ತಿಗಳ ಹಾವಳಿಯಿಂದಾಗಿ ಮನುಷ್ಯ ಮೋಸ, ವಂಚನೆಗೆ ಒಳಗಾಗುತ್ತಿದ್ದು, ಶಿಕ್ಷಣದ ಕೊರತೆಯೇ ಇದಕ್ಕೆ ಕಾರಣ. ಹಬ್ಬ-ಹರಿದಿನಗಳ ಆಚರಣೆಯ ನೆಪದಲ್ಲಿ ದುಂದುವೆಚ್ಚ ಮಾಡುತ್ತಿದ್ದು, ಇದಕ್ಕೆ ಕಡಿವಾಣ ಹಾಕುವ ಜೊತೆಗೆ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಉಜ್ವಲ ಭವಿಷ್ಯದ ಕಡೆ ಗಮನಹರಿಸಬೇಕೆಂದು ಮನವಿ ಮಾಡಿದರು.

ಬೆಂಗಳೂರು ಸ್ಲಂ ಜನಾಂದೋಲ-ಕರ್ನಾಟಕ ರಾಜ್ಯ ಸಂಚಾಲಕ ಎ. ನರಸಿಂಹ ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಣ ಮನುಷ್ಯನ ಬದುಕನ್ನು ವಿಮೋಚನೆಗೊಳಿಸುವ ಸಾಧನವಾಗಿದೆ. ಅಲ್ಲದೇ ನಮ್ಮ ಕನಸುಗಳನ್ನು ನನಸು ಮಾಡುವ ಆಯುಧ ಕೂಡ ಆಗಿದೆ ಎಂದು ಹೇಳಿದರು.

ಶಿಕ್ಷಣ ನಮ್ಮ ಬದುಕಿನಲ್ಲಿ ಆತ್ಮವಿಶ್ವಾಸ ತುಂಬಿ, ತಿಳಿವಳಿಕೆ ಮೂಡಿಸಲು ಅನುಕೂಲ ಮಾಡಿಕೊಡುತ್ತದೆ. ಕೀಳರಿಮೆ ಬಿಟ್ಟು ಓದಿನ ಕಡೆ ಗಮನಹರಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪೀಪಲ್ಸ್ ಲಾಯರ್ಸ್ ಗಿಲ್ಡ್ ಅಧ್ಯಕ್ಷರೂ, ಹಿರಿಯ ವಕೀಲರೂ ಆದ ಅನಿಸ್ ಪಾಷ ಮಾತನಾಡಿ ಪ್ರೀತಿ, ವಾತ್ಸಲ್ಯ, ಭಾವೈಕ್ಯತೆ ಹಾಗೂ ಜಾತಿಯ ತಾರತಮ್ಯ ಇಲ್ಲದಂತೆ ಬದುಕುವ ವಿಶ್ವಾಸವನ್ನು ತಳ ಸಮುದಾಯದಲ್ಲಿ ಮಾತ್ರ ಕಾಣಲು ಸಾಧ್ಯ ಎಂದರು.

ಸ್ಲಂ ಜನಾಂದೋಲನ- ಕರ್ನಾಟಕದ ದಾವಣಗೆರೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಣುಕ ಯಲ್ಲಮ್ಮ ಹಾವೇರಿ ಅಧ್ಯಕ್ಷತೆ ವಹಿಸಿದ್ದರು. ಸಿರಾಜ್ ಅಹಮದ್, ಎ. ಜಾಕೀರ್ ಹುಸೇನ್, ಸುಹೀಲ್ ಬಾಷಾ, ಎಂ. ಶಬ್ಬೀರ್ ಸಾಬ್, ಮಂಜುಳಾ, ರೇಖಾ ಮತ್ತಿತರರಿದ್ದರು.

# ಅಗ್ನಿಪಥ್ ಯೋಜನೆ ವಿರೋಧಿಸಿ ಪ್ರತಿಭಟನೆ




**ಹರಪನಹಳ್ಳಿ**

ಹರಪನಹಳ್ಳಿ, ಜೂ.26- ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ಅಗ್ನಿಪಥ್ ಯೋಜನೆ ವಿರೋಧಿಸಿ ಪಟ್ಟಣದಲ್ಲಿ ರೈತ ಸಂಘ ಹಾಗೂ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ತಹಶೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಪ್ರವಾಸಿ ಮಂದಿರ ವೃತ್ತದಿಂದ ಹೊರಟ ಮೆರವಣಿಗೆಯು ಮಿನಿ ವಿಧಾನಸೌಧಕ್ಕೆ ತೆರಳಿ ಬಹಿರಂಗ ಸಭೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಈ ವೇಳೆ ಯುವ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಮತ್ತೂರು ಬಸವರಾಜ್ ಮಾತನಾಡಿ, ಅಗ್ನಿಪಥ್ ಯೋಜನೆ ದೇಶದ ಯುವಕರಿಗೆ ಮರಣ ಶಾಸನವಾಗಿದೆ.ಸೈನ್ಯಕ್ಕೆ ಸೇರಿ ಭಾರತಾಂಬೆಯ ಸೇವೆ ಮಾಡಬೇಕು ಎಂದು ಕನಸು ಕಂಡ ಯುವಕರಿಗೆ ಕೇವಲ ನಾಲ್ಕು ವರ್ಷ ಸೇವೆಗೆ ಸೇರಿಸಿಕೊಂಡು ನಂತರ ಕೈ ಬಿಡುವ ಯೋಜನೆ ನ್ಯಾಯ ಸಮ್ಮತವಲ್ಲ, ಸಂವಿಧಾನ ಬಾಹಿರ. ಇಂತಹ ಯೋಜನೆ ವಿರುದ್ಧ ಉತ್ತರ ಭಾರತ ಯುವಕರು ಹೋರಾಟಕ್ಕೆ ಮುಂದಾಗಿದ್ದಾರೆ ಎಂದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಕರಡಿದುರ್ಗದ ಚೌಡಪ್ಪ ಮಾತನಾಡಿ, ಯುವಕರಿಗೆ ಭದ್ರತೆ ಇಲ್ಲದ ಅಗ್ನಿಪಥ್ ಯೋಜನೆ ಕೈ ಬಿಟ್ಟು ದೂರದೃಷ್ಟಿಯುಳ್ಳ ಯೋಜನೆಯನ್ನು ಜಾರಿಗೊಳಿಸಿ ಯುವಕರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.

ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಹರಿಯಮ್ಮನಹಳ್ಳಿ ಎಚ್. ಶಿವರಾಜ್, ಎಂ.ದಾದಾಪೀರ್, ಕೆ.ಬಸವರಾಜ್, ರೈತ ಸಂಘದ ಬಿ.ಎ.ಸುರೇಶ್, ಶಫಿವುಲ್ಲಾ ಕುಂಚೂರು, ಗೌರಿಹಳ್ಳಿ ಹನುಮಂತಪ್ಪ, ಕಲ್ಲಹಳ್ಳಿ ವೆಂಕಟೇಶ್, ಇಮಾಮ್ ಹುಸೇನ್, ಕುಮಾರನಾಯ್ಕ, ಗುಡಿಹಳ್ಳಿ ಹಾಲೇಶ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಸ್ಕೌಟ್-ಗೈಡ್ಸ್ ಮುಕ್ತದಳ ಸೇರಿಸಲು ಮನವಿ

ದಾವಣಗೆರೆ, ಜೂ 26- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ದಾವಣಗೆರೆ ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಹಾಗೂ ಚೇತನ ಓಪನ್ ಗೈಡ್ ಕಂಪನಿಯ ಮುಕ್ತದಳಕ್ಕೆ ತಮ್ಮ 5 ರಿಂದ 8 ನೇ ತರಗತಿ ಮಕ್ಕಳನ್ನು ಕಳಹಿಸುವಂತೆ ನಾಯಕರಾದ ಜೆ.ಎಸ್. ವಿಜಯ್ ಹಾಗೂ ಪಿ. ಕಾವೇರಿ ಮನವಿ ಮಾಡಿದ್ದಾರೆ.

ಕಳೆದ 25 ವರ್ಷಗಳಿಂದ ಮುಕ್ತದಳವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರಲಾಗುತ್ತಿದೆ. ಇಲ್ಲಿಯವರೆಗೆ ಹಲವಾರು ಮಕ್ಕಳು ರಾಷ್ಟ್ರಪತಿ ಪುರಸ್ಕಾರ ಪಡೆದುಕೊಂಡಿದ್ದಾರೆ. ಅತ್ಯುತ್ತಮ ಮುಕ್ತದಳ ಎಂಬ ರಾಜ್ಯಪಾಲರ ಪ್ರಶಸ್ತಿಗೂ ಪಾತ್ರವಾಗಿದೆ.

## ಸಿಗದ ಪೆಟ್ರೋಲ್-ಡೀಸೆಲ್

**(1ನೇ ಪುಟದಿಂದ)** ಕಾರಣಗಳಿಂದಾಗಿ ಇಂಧನ ತರಿಸುವುದು ತಡವಾಗಲಿದೆ ಎಂದು ಶ್ರೀಲಂಕಾ ಸರ್ಕಾರ ಶನಿವಾರ ತಿಳಿಸಿತ್ತು. ಪೆಟ್ರೋಲ್ ಪಂಪ್‌ಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಸಿಗುತ್ತಿಲ್ಲ. ಈ ಮಧ್ಯೆಯೇ ಬೆಲೆ ಹೆಚ್ಚಳ ಮಾಡಲಾಗಿದೆ. ಇಂಧನ ಬರುವವರೆಗೂ ಪೆಟ್ರೋಲ್ ಪಂಪ್‌ಗಳ ಮುಂದೆ ಸರದಿಯಲ್ಲಿ ನಿಲ್ಲದಂತೆ ಸರ್ಕಾರ ಜನರಿಗೆ ತಿಳಿಸಿದೆ.

## ಯಕ್ಷಗಾನ ತರಬೇತಿ ಶಿಬಿರಕ್ಕೆ ಆಹ್ವಾನ

ದಾವಣಗೆರೆ, ಜೂ. 26- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆ ಯಿಂದ ಯಕ್ಷಗಾನ ತರಬೇತಿ ಶಿಬಿರ ನಡೆ ಯಲಿದೆ ಎಂದು ಸಂಸ್ಥೆ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ. ಶಿಬಿರವನ್ನು ವೃತ್ತಿನಿರತ ಯಕ್ಷಗಾನ ಕಲಾವಿದ ಹಟ್ಟಿಯಂಗಡಿ ಆನಂದ ಶೆಟ್ಟಿ ನಡೆಸಿಕೊಡಲಿದ್ದಾರೆ ಎಂದು ಸಂಸ್ಥೆಗಳ ಸಂಸ್ಥಾಪಕ ಸಾಲಿಗ್ರಾಮ ಗಣೇಶ ಶೆಣೈ ತಿಳಿಸಿದ್ದಾರೆ. ವಿವರಕ್ಕೆ ಸಂಸ್ಥೆಯ ಖಜಾಂಚಿ ನೀಲಾವರ ಭಾಸ್ಕರ ನಾಯಕ್ (94493 74300) ಅವರನ್ನು ಸಂಪರ್ಕಿಸಬಹುದು.

## 56 ಸಾವಿರ ಅರ್ಜಿ

**(1ನೇ ಪುಟದಿಂದ)** ವಾಯುಪಡೆ, ಇದುವರೆಗೂ 56,960 ಅರ್ಜಿಗಳು ಬಂದಿರುವುದಾಗಿ ತಿಳಿಸಿದೆ. ಜೂನ್ 14ರಂದು ಕೇಂದ್ರ ಸರ್ಕಾರ ಅಗ್ನಿಪಥ ಯೋಜನೆಯನ್ನು ಪ್ರಕಟಿಸಿತ್ತು. ಯೋಜನೆಯ ವಿರುದ್ಧ ದೇಶದ ಹಲವೆಡೆ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು.

# ಬದಲಾವಣೆ ನಿರಂತರವಾಗಿರಲಿ: ಚೇತನ್‌ರಾಮ್

ದಾವಣಗೆರೆ, ಜೂ.26- ನೂತನ ಶಿಕ್ಷಣ ನೀತಿಯು ಕೌಶಲ್ಯಕ್ಕೆ ಪ್ರಾಮುಖ್ಯತೆ ಕೊಟ್ಟಿದೆ. ಬದಲಾವಣೆಯು ನಿರಂತರವಾಗಿರಬೇಕು, ಇದೇ ಪರಿವರ್ತನೆ ಎಂದು ಬಾಪೂಜಿ ಹೈ-ಟೆಕ್ ಎಜುಕೇಷನ್ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ವ್ಯಕ್ತಿತ್ವಾಭಿವೃದ್ಧಿ ತರಬೇತುದಾರ ಆರ್.ಎ.ಚೇತನ್ ರಾಮ್ ಹೇಳಿದರು.

ಪದವಿಯಿಂದ ಜ್ಞಾನ ಪಡೆಯಬಹುದು. ಆದರೆ ಕೌಶಲ್ಯ ಬೇಕೆಂದರೆ ಪ್ರಾಯೋಗಿಕಾನುಭವ ಅವಶ್ಯ. ಆದ್ದರಿಂದಲೇ ನೂತನ ಶಿಕ್ಷಣ ನೀತಿಯು ಕೌಶಲ್ಯಕ್ಕೆ ಮಹತ್ವ ಕೊಟ್ಟಿದೆ ಎಂದು ಅಂತರರಾಷ್ಟ್ರೀಯ ವ್ಯಕ್ತಿತ್ವಾಭಿವೃದ್ಧಿ ತರಬೇತುದಾರ ಆರ್.ಎ.ಚೇತನ್ ರಾಮ್ ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್‌ನಲ್ಲಿ ನಿನ್ನೆ ಏರ್ಪಾಡಾಗಿದ್ದ ಬಿಸಿಎ ಮತ್ತು ಬಿಕಾಂ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಕಾರಾತ್ಮಕ ಬದಲಾವಣೆಯು ನಿರಂತರವಾಗಿರಬೇಕು. ಇದೇ ನಿಜವಾದ ಪರಿವರ್ತನೆ. ಜ್ಞಾನವೇ ಶಕ್ತಿಯಾದರೂ ಪರಿವರ್ತನೆಗೆ ಕೌಶಲ್ಯವೂ ಅತ್ಯವಶ್ಯ. ಪದವಿ ಗಳಿಕೆಯು ಜೀವನದ ಸಾಧನೆಯ ಕೊನೆಯಲ್ಲ. ಇದು ಆರಂಭದ ಆರಂಭವಷ್ಟೇ ಎಂದರು.

ನಾವೂ ಬದುಕಬೇಕು, ಉಳಿದವರಿಗೂ ಬದುಕಲು ಬಿಡಬೇಕು. ನಾವೆಷ್ಟೇ ಸಂತೋಷವಾಗಿದ್ದರೂ ಸಾಲದು, ಇತರರೂ ಸಂತೋಷವಾಗಿರುವಂತೆ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಚೇರ್ಮನ್ ಅಥಣಿ ಎಸ್. ವೀರಣ್ಣ ಮಾತನಾಡಿ, ನೈಜತೆಯ ಅನುಭವದೊಂದಿಗೆ ಸಾಮರ್ಥ್ಯ ಹೆಚ್ಚಿಸಿಕೊಂಡರೆ ಮಾತ್ರ ಭವಿಷ್ಯದಲ್ಲಿ ಅವಕಾಶಗಳು ಲಭ್ಯ ಎಂದರು.

ಪ್ರಾಂಶುಪಾಲ ಡಾ.ಬಿ.ವೀರಪ್ಪ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಡಿ.ಎಂ.ಸ್ವಾತಿ ಸ್ವಾಗತ ಕೋರಿದರು. ಪ್ರೊ. ಕೆ.ಎಸ್.ಮುನವಳ್ಳಿ ಮಠ್ ಹಾಗೂ ಪ್ರೊ. ಕೆ.ಸಿದ್ಧಲಿಂಗಯ್ಯ, ಸಿದ್ಧಲಿಂಗಪ್ಪ ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಪ್ರೊ. ಕೆ.ವೈ. ವೀರೇಂದ್ರ ಪ್ರತಿಜ್ಞಾ ವಿಧಿ ಬೋಧಿಸಿದರು.

ದರ್ಶನ್, ಅನುಷಾ, ಅಭಿಷೇಕ್ ಮತ್ತು ನಯನ ನಿರೂಪಿಸಿದರೆ ಪ್ರಾರ್ಥನೆಯನ್ನು ಸಂಧ್ಯಾ ಮತ್ತು ಸಂಗಡಿಗರು ಹಾಡಿದರು.

ಪ್ರೊ. ಎಲ್.ಎನ್.ಚೇತನಾ ವಂದನೆ ಅರ್ಪಿಸಿದರು. ಎಂಬಿಎ ನಿರ್ದೇಶಕ ಡಾ.ಸ್ವಾಮಿ ತ್ರಿಭುವನಾನಂದ ಮತ್ತಿತರರು ಉಪಸ್ಥಿತರಿದ್ದರು.



# ಗಲಭೆಗಳ ಸುಳ್ಳು ಹೇಳಿಕೆ : ತೀಸ್ತಾ ಶೀತಲ್ವಾಡ್ ಬಂಧನ



ಅಹಮದಾಬಾದ್, ಜೂ. 26 – ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಫೋರ್ಜರಿ, ಅಪರಾಧಿಕ ಸಂಚು ನಡೆಸಿದ ಹಾಗೂ ಅಪರಾಧಿಕ ತನಿಖಾ ಪ್ರಕ್ರಿಯೆಗೆ ಅವಮಾನಿಸಿದ ಆರೋಪ ಎದುರಿಸುತ್ತಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಶೀತಲ್ವಾಡ್ ಅವರನ್ನು ಅಹಮದಾಬಾದ್ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ.

ನಿನ್ನೆ ಮುಂಬೈನಲ್ಲಿ ಅವರನ್ನು ವಶಕ್ಕೆ ತೆಗೆದುಕೊಂಡು ಗುಜರಾತ್‌ಗೆ ರವಾನಿಸಲಾಗಿತ್ತು. ಗುಜರಾತ್ ಮಾಜಿ ಡಿ.ಜಿ.ಪಿ. ಶ್ರೀಕುಮಾರ್ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರನ್ನು ಈಗಾಗಲೇ ಬಂಧಿಸಲಾಗಿದೆ.

2002ರ ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಶೀತಲ್ವಾಡ್, ಶ್ರೀಕುಮಾರ್ ಹಾಗೂ ಭಟ್ ಅವರು ವಿಶೇಷ ತನಿಖಾ ದಂಡಕ್ಕೆ ಹಾಗೂ ನ್ಯಾಯಾಲಯಗಳಿಗೆ ಸಲ್ಲಿಸಿದ ದಾಖಲೆಗಳನ್ನು ಸಂಗ್ರಹಿಸುತ್ತಿದ್ದೇವೆ ಎಂದು ಡಿಸಿಪಿ (ಅಪರಾಧ) ಚೈತನ್ಯ ಮಾಂಡಲಿಕ್ ಹೇಳಿದ್ದಾರೆ.

ಇನ್ನಷ್ಟು ವ್ಯಕ್ತಿಗಳು ಅಪರಾಧಿಕ ಸಂಚು ನಡೆಸಿರಬಹುದು. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಮಾಂಡಲೀಕ್ ಹೇಳಿದ್ದಾರೆ.

ಅಪರಾಧ ದಳದ ಇನ್ಸ್‌ಪೆಕ್ಟರ್ ಡಿ.ಬಿ. ಬರಾದ್ ಅವರು ದಾಖಲಿಸಿರುವ ಎಫ್.ಐ.ಆರ್. ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. 2002ರ ಗಲಭೆಗಳಲ್ಲಿ ಮೋದಿ ಪಾತ್ರವಿಲ್ಲ ಎಂದು ಎಸ್.ಐ.ಟಿ. ನೀಡಿದ ವರದಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು.

ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಸೇರಿದಂತೆ ಹಲವರು ಅಲ್ಪಸಂಖ್ಯಾತರ ವಿರುದ್ಧ ಸಂಚು ನಡೆಸಿದ್ದಾರೆ ಎಂದು ಆರೋಪಿಸಲಾಗಿತ್ತು. ಸುಳ್ಳು ಹೇಳಿಕೆಗಳ ಮೂಲಕ ತನಿಖೆಯಲ್ಲಿ ಭಾಗಿಯಾದ ಪ್ರತಿಯೊಂದು ಸಂಸ್ಥೆಯ ವಿರುದ್ಧ ಆರೋಪಗಳನ್ನು ಮಾಡಲಾಗಿತ್ತು. ಇಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಟಿಪ್ಪಣಿ ಮಾಡಿತ್ತು.

ತನಿಖೆ ಈಗ ಆರಂಭಿಕ ಹಂತದಲ್ಲಿದೆ. ಅಪರಾಧಿಕ ಸಂಚಿನಲ್ಲಿ ಭಾಗಿಯಾದ ಎಲ್ಲ ವ್ಯಕ್ತಿಗಳನ್ನು ಬಂಧಿಸಲಾಗುವುದು ಎಂದು ಮಾಂಡಲೀಕ್ ಹೇಳಿದ್ದಾರೆ.

# ರಾಣೇಬೆನ್ನೂರು : ಲಿಂಗವಂತ ಸಮಾಜ ವಿದ್ಯಾರ್ಥಿಗಳಿಗೆ ಪುರಸ್ಕಾರ

ರಾಣೇಬೆನ್ನೂರು, ಜೂ. 26- ರಾಣೇಬೆನ್ನೂರು ತಾಲ್ಲೂಕು ನಿವೃತ್ತ ಲಿಂಗವಂತ ಸಮಾಜ ನೌಕರರ ಸಂಘದ ವತಿಯಿಂದ ರಾಣೇಬೆನ್ನೂರು ತಾಲ್ಲೂಕಿನ ಕನ್ನಡ ಮಾಧ್ಯಮ ಪ್ರೌಢಶಾಲೆಗಳಲ್ಲಿ ಓದಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಒಟ್ಟಾರೆ ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಹಾಗೂ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಗಳಿಸಿದ ತಲಾ ಮೂರು ಜನ ಲಿಂಗವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಆಸಕ್ತ ಪ್ರತಿಭಾವಂತ ವಿದ್ಯಾರ್ಥಿಗಳು ಜುಲೈ 10ರೊಳಗಾಗಿ ತಲುಪುವಂತೆ ವಿ. ವೀ. ಹರಪನಹಳ್ಳಿ, ನಿವೃತ್ತ ಶಿಕ್ಷಕರು, ಅಶೋಕ ನಗರ, ಸುಜನ ಆಸ್ಪತ್ರೆ ಹತ್ತಿರ, ರಾಣೇಬೆನ್ನೂರು ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು.

ವಿವರಕ್ಕೆ 99640 30664 ಮತ್ತು 9449 982689 ಕ್ಕೆ ಸಂಪರ್ಕಿಸಬಹುದಾಗಿದೆ.

# ಅವಳಿ ತಾಲ್ಲೂಕಿನಲ್ಲಿ ಚತುಷ್ಪಥ ರಸ್ತೆ ನಿರ್ಮಾಣ



ನ್ಯಾಮತಿ, ಜೂ.26- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆಯ್ದ ಪ್ರದೇಶಗಳಲ್ಲಿ ಚತುಷ್ಪಥ ರಸ್ತೆ ನಿರ್ಮಾಣದ ಜೊತೆಗೆ ಕೆರೆಗಳಿಗೆ ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಕೊಡತಾಳು-ಮಾದಾಪುರ ಗ್ರಾಮದ ಬಳಿ ಕೆರೆ ಏರಿಗೆ ತಡೆಗೋಡೆ ನಿರ್ಮಾಣ ಕಾಮಗಾರಿಯ ಜೊತೆಗೆ ರಸ್ತೆ ಅಗಲೀಕರಣ ಕಾಮಗಾರಿಗೆ 4.50 ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ, ಅವರು ಮಾತನಾಡಿದರು.

ನನ್ನ ಮತ ಕ್ಷೇತ್ರದ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಸಾರ್ವಜನಿಕರ ಹಿತಾಸಕ್ತಿಯ ದೃಷ್ಟಿಯಿಂದ ಹಲವಾರು ರಸ್ತೆಗಳು ಕಿರಿದಾಗಿದ್ದು ವಾಹನಗಳ ಸುಗಮ ಸಂಚಾರಕ್ಕಾಗಿ ದ್ವಿಪಥ ರಸ್ತೆಗಳನ್ನು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಸುಂದರವಾಗಿ ಚತುಷ್ಪಥ ರಸ್ತೆಗಳನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು.

ಅದೇ ರೀತಿ ಕೆರೆ ಏರಿ ಹಾಗೂ ತಿರುವು ರಸ್ತೆಗಳನ್ನು ಅಗಲೀಕರಣ ಮಾಡಿ ಕೆರೆ ಏರಿಗಳಿಗೆ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ತಾಲ್ಲೂಕಿನ ಅರಕೆರೆ ಎಕೆ ಕಾಲೋನಿಯಿಂದ ಮಾಸಡಿ ಗ್ರಾಮದವರೆಗೆ 4.75 ಕೋಟಿ ರೂಪಾಯಿ ವೆಚ್ಚದಲ್ಲಿ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದ ಶಾಸಕರು, ಹೊನ್ನಾಳಿ ನಗರದ ಟಿಬಿ ವೃತ್ತದಿಂದ ದಿಡಗೂರು ಕೃಷ್ಣಪ್ಪ ನಗರದ ಡಾಬಾದವರೆಗೆ 7.50 ಕೋಟಿ ರೂಪಾಯಿ ವೆಚ್ಚದಲ್ಲಿ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಯ ಜೊತೆಗೆ ರಸ್ತೆ ವಿಭಜಕ ಹಾಗೂ ಅಲಂಕಾರಿಕ ದೀಪಗಳ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೇ ಎಂದರು.

> ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಚತುಷ್ಪಥ ರಸ್ತೆ ನಿರ್ಮಾಣದ ಜೊತೆಗೆ ಕೆರೆಗಳಿಗೆ ತಡೆಗೋಡೆ ನಿರ್ಮಾಣ.
>
> -ಎಂ.ಪಿ. ರೇಣುಕಾಚಾರ್ಯ, ಶಾಸಕ

ಕುಂದೂರು ಹೊರವಲಯದ ಬೈಪಾಸ್ ರಸ್ತೆ ಬಳಿ ರಸ್ತೆ ಅಗಲೀಕರಣ ಕಾಮಗಾರಿಯ ಜೊತೆಗೆ ತಡೆಗೋಡೆ ನಿರ್ಮಾಣ ಮಾಡಲು 6.50 ಕೋಟಿ ರೂಪಾಯಿ ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ.ಅಧ್ಯಕ್ಷರಾದ ಲಲಿತಮ್ಮ, ಉಪಾಧ್ಯಕ್ಷ ಗಿರೀಶ್, ಸದಸ್ಯರಾದ ನಾಗರಾಜ್ ಸೇರಿದಂತೆ ಮುಖಂಡರಾದ ಮಲ್ಲೇಶಪ್ಪ, ತತ್ಯಾನಾಯ್ಕ, ರೇಣು, ರುದ್ರೇಶ್, ಮಂಜು ಪಾಟೀಲ್, ಉಮೇಶ್ ನಾಯ್ಕ, ಮಂಜಪ್ಪ, ದಿನೇಶ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

# ದೀನದಯಾಳ್ ಅಂತ್ಯೋದಯ ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಹೊನ್ನಾಳಿ, ಜೂ.26- ದೀನದಯಾಳ್ ಅಂತ್ಯೋದಯ ಯೋಜನೆಯ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ವ್ಯಕ್ತಿಗತ ಉದ್ಯಮಶೀಲತೆ, ಗುಂಪು ಉದ್ಯಮ ಕಾರ್ಯಕ್ರಮದಡಿ ಗುಂಪು ಉದ್ಯಮ ಕೈಗೊಳ್ಳಲು ಎಸ್.ಎಚ್.ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್ ಕಾರ್ಯಕ್ರಮದಡಿ ಸಾಲ ಪಡೆಯಲು ಆಸಕ್ತಿಯುಳ್ಳ ಬಡತನ ರೇಖೆಗಿಂತ ಕೆಳಗಿರುವ ಪಟ್ಟಣ ವ್ಯಾಪ್ತಿಯಲ್ಲಿ ಬರುವ ನಿವಾಸಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜೂನ್ 30ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಡೇ-ನಲ್ಮ್ ಶಾಖೆಯಲ್ಲಿ ವಿಚಾರಿಸಬಹುದಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

## ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ : ಪೂನಾ-ಬೆಂಗಳೂರು ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ-2. ದೂರವಾಣಿ : 231155, 272540**

### ಸ್ಥಿರಾಸ್ತಿ ಹರಾಜು ಪ್ರಕಟಣೆ

ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ, ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ **ಜಪ್ತಿ/ಆಧಾರ** ಮಾಡಲ್ಪಟ್ಟಿರುವ ಸ್ಥಿರ ಸ್ವತ್ತನ್ನು **ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿ.ಆರ್./ಡಿವಿಜಿ/98/2019-20ರ ಮೇರೆಗೆ** ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಭಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ.ಸಂ. | ಸಾಲಗಾರರ ಹೆಸರು | ಸದರಿ ಅಮಲ್ಜಾರಿ ಕ್ರ.ಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಮೊತ್ತ | ಆಧಾರ/ಜಪ್ತಿ ಮಾಡಲ್ಪಟ್ಟ ಸ್ಥಿರಾಸ್ತಿ ವಿಸ್ತೀರ್ಣ ಮತ್ತು ವಿವರಗಳು | ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ |
|---|---|---|---|---|
| 1 | **ಮೆ॥ ಶ್ರೀ ಸಾಯಿಬಾಬಾ ಇಂಡಸ್ಟ್ರೀಸ್, ಪ್ರೊ॥ ಮಹಮ್ಮದ್ ಚಮನ್,** ಬಿ.ಡಿ.ಓ. ಆಫೀಸ್ ಎದುರು, ಆರ್.ಎಂ.ಸಿ. ಲಿಂಕ್ ರಸ್ತೆ, ದಾವಣಗೆರೆ. ಹಾಗೂ ಸಹ ಸಾಲಗಾರರಾದ **ಶ್ರೀಮತಿ ಹೆಚ್. ಪೀರಾಂಬಿ ಕೋಂ ಲೇಟ್ ಹೆಚ್. ಮರ್ದಾನ್ ಸಾಬ್,** ಡೋರ್ ನಂ. 1333/32, ಎಂ.ಸಿ. ಪೋಹಾ ಮಿಲ್, ಇಂದಿರಾ ನಗರ, ಬೇತೂರು ರಸ್ತೆ, ದಾವಣಗೆರೆ. | **1) ಇ.ಪಿ.ನಂ. 14/2019-20 ರೂ. 17,66,269-00 (ದಿನಾಂಕ : 17.05.2022ರವರೆಗೆ ಬಡ್ಡಿ ಹಾಗೂ ಇತರೆ ಖರ್ಚು)** | ದಾವಣಗೆರೆ ಸಿಟಿ, 3ನೇ ವಾರ್ಡ್, 4ನೇ ಡಿವಿಜನ್, ಎಂ.ಸಿ. ಪೋಹಾ ಮಿಲ್ ಹಿಂಭಾಗ, ಬೇತೂರು ರಸ್ತೆ, ಚಾಮರಾಜ ಪೇಟೆ ಬಡಾವಣೆ, 'ಸಿ' ಬ್ಲಾಕ್‌ನಲ್ಲಿರುವ ಎ.ಸಿ. ಶೀಟ್ ಹೊದಿಕೆವುಳ್ಳ ವಾಣಿಜ್ಯೋಪಯೋಗಿ ಸೈಟ್ ನಂ. 18 ಮತ್ತು 19 ಎರಡು ಸೈಟಿನ ಅಳತೆ 30x50 ಇದರ ಚಾಲ್ತಿ ಮುನ್ಸಿಪಲ್ ಡೋರ್ ನಂ. 1333/27 ಮತ್ತು 1333/28 ಇದಕ್ಕೆ ಚೆಕ್ಕುಬಂದಿ : ಪೂರ್ವಕ್ಕೆ : ಖಾಸಗಿ ಸೈಟ್ ನಂ. 20 ಮತ್ತು 21, ಪಶ್ಚಿಮಕ್ಕೆ : ಖಾಸಗಿ ಸೈಟ್ ನಂ. 17, ಉತ್ತರಕ್ಕೆ : ಕನ್ಸರ್‌ವೆನ್ಸಿ ರಸ್ತೆ ಮತ್ತು ದಕ್ಷಿಣಕ್ಕೆ ; ಮೇನ್ ರಸ್ತೆ. | **ದಿನಾಂಕ ; 06.07.2022ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಹರಾಜು ನಡೆಯುವ ಸ್ಥಳ : ಸ್ಥಿರಾಸ್ತಿ ಮುಂಭಾಗದಲ್ಲಿ** |

**ಹರಾಜಿನ ಷರತ್ತುಗಳು :** 1. ಹರಾಜಿನಲ್ಲಿ ಭಾಗವಹಿಸುವವರು ಬ್ಯಾಂಕಿನಲ್ಲಿ ಅಥವಾ ಹರಾಜು ಸ್ಥಳದಲ್ಲಿ ರೂ. 20,000/- ಮುಂಗಡ ಠೇವಣಿಯನ್ನು ನಗದು / ಡಿ.ಡಿ. ಮುಖಾಂತರ ಪಾವತಿಸಬೇಕು. ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಜಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಹೆಸರು, ವಿಳಾಸ, ಭಾವಚಿತ್ರ ಇರುವ ಗುರುತಿನ ಚೀಟಿಯಾದ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ದೃಢೀಕರಣದೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೊಂದಾಯಿಸಿಕೊಳ್ಳಬೇಕು. 2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು, 3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. 4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. 5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು (ಹರಾಜಿನ ಉಳಿದ ಷರತ್ತುಗಳನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ).

ಸಹಿ/- **ಕೋಗುಂಡಿ ಬಕ್ಕೇಶಪ್ಪ**
**ಅಧ್ಯಕ್ಷರು**

ಸಹಿ/- **ಅಂದನೂರು ಮುಪ್ಪಣ್ಣ**
**ಉಪಾಧ್ಯಕ್ಷರು**

ಸಹಿ/- **ಡಿ.ವಿ. ಆರಾಧ್ಯಮಠ್**
**ಪ್ರಧಾನ ವ್ಯವಸ್ಥಾಪಕರು**

**ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ,**
**ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ**
ಸಹಿ/- **ಉಷಾ ಹೆಚ್.ಆರ್.**
**ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿ. 441,**
**ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ.,**

# ಕಾಮಗಾರಿ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಲು ಕರೆ

## ಮಾಯಕೊಂಡ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದ ಸಂಸದ ಸಿದ್ದೇಶ್ವರ



ದಾವಣಗೆರೆ, ಜೂ. 26 -ಮಾಯಕೊಂಡ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಮೊನ್ನೆ ನಡೆದ ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಗ್ರಾಮ ಪಂಚಾಯತಿ ಸದಸ್ಯರು ಮತ್ತು ಮುಖಂಡರು ಕಾಮಗಾರಿ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಬೇಕು. ಸರ್ಕಾರ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಸಾಕಷ್ಟು ಹಣ ಬಿಡುಗಡೆ ಮಾಡಿದೆ. ಸರ್ಕಾರದ ಅನುದಾನ ದುರ್ಬಳಕೆಯಾಗದಂತೆ ಜನರೇ ಜಾಗೃತಿ ವಹಿಸಬೇಕು ಎಂದರು.

ಶಾಸಕ ಪ್ರೊ. ಲಿಂಗಣ್ಣ ಮಾತನಾಡಿ, ನೀರಾವರಿ ಇಲಾಖೆ ವತಿಯಿಂದ ಮಂಜೂರಾದ 10 ಕೋಟಿಯಲ್ಲಿ 2.75 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹೊನ್ನೂರು ಗ್ರಾಮಸ್ಥರು ಹೊನ್ನೂರು- ಸಿದ್ದನೂರು ಕೆರೆ ಏರಿ ರಸ್ತೆ ನಿರ್ಮಾಣಕ್ಕೆ ಮನವಿ ಮಾಡಿದ್ದಾರೆ. ಈಗಾ ಗಲೇ 10 ಲಕ್ಷ ಬಿಡುಗಡೆ ಮಾಡಲಾಗಿದೆ. ಶೀಘ್ರ ಅಗತ್ಯ ಅನುದಾನ ನೀಡಲಾಗುತ್ತದೆ ಎಂದರು.

ಮಾಜಿ ಶಾಸಕ ಬಸವರಾಜ ನಾಯ್ಕ್, ಮಾಯಕೊಂಡ ಬಿಜೆಪಿ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ, ಸಂಗಣ್ಣನವರು, ದಿಷಾ ಸಮಿತಿ ಸದಸ್ಯ ಗಂಗನಕಟ್ಟೆ ಸಂಗಣ್ಣ, ಬಿಜೆಪಿಯ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಮುಖಂಡರಾದ ಓಂಕಾರಪ್ಪ ಕರಿಲಕ್ಕೇನಹಳ್ಳಿ ಮತ್ತು ಇತರರಿದ್ದರು.

## ಕುಸ್ತಿಯಲ್ಲಿ ಪರಶುರಾಮ್‌ಗೆ ಕಂಚು



ದಾವಣಗೆರೆ, ಜೂ.26- ಹರಿಯಾಣದ ಪಂಚಕುಳದಲ್ಲಿ ಈಚೆಗೆ ನಡೆದ 'ಖೇಲೊ ಇಂಡಿಯಾ ಯೂತ್ ಗೇಮ್ಸ್'ನಲ್ಲಿ ನಗರದ ವಿ. ಪರಶುರಾಮ್ ಅವರು 51 ಕೆಜಿ ವಿಭಾಗದ ಕುಸ್ತಿಯಲ್ಲಿ ಕಂಚಿನ ಪದಕ ಪಡೆದಿದ್ದಾರೆ.

ಪರಶುರಾಮ್ ಅವರಿಗೆ ಕೊರಚ ಸಮಾಜದ ಅಧ್ಯಕ್ಷ ಬಿ. ಪರಸಪ್ಪ, ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಸಂತೋಷ ಕುಮಾರ್ ಅಭಿನಂದಿಸಿದ್ದಾರೆ.

# ಆಶಾ ಕಾರ್ಯಕರ್ತೆಯರ ಕೆಲಸ ಸ್ಮರಣೀಯ

## ಹೊನ್ನಾಳಿ: ಆಶಾ ಕಾರ್ಯಕರ್ತೆಯರ ಸನ್ಮಾನ ಕಾರ್ಯಕ್ರಮದಲ್ಲಿ ಕೆ.ಜಿ. ನಿಂಗಪ್ಪ



ಹೊನ್ನಾಳಿ, ಜೂ.26- ಆಶಾ ಕಾರ್ಯಕರ್ತೆಯರ ಕೆಲಸ, ಕಾರ್ಯಗಳು ಸ್ಮರಣೀಯವಾದವು ಎಂದು ಹೊಳಲೂರು ಮಂಡಲದ ಮಾಜಿ ಪ್ರಧಾನ ಕೆ.ಜಿ.ನಿಂಗಪ್ಪ ಹೇಳಿದರು.

75ನೇ ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಥಮ ಆಡಳಿತಾಧಿಕಾರಿಣಿ ಮಾತೇಶ್ವರಿ ಜಗದಂಬಾ ಸರಸ್ವತಿ ಅವರ 57ನೇ ಪುಣ್ಯಸ್ಮರಣೆ ಪ್ರಯುಕ್ತ ಶುಕ್ರವಾರ ಪಟ್ಟಣದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಆಶಾ ಕಾರ್ಯಕರ್ತೆಯರ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಡಿಮೆ ಗೌರವ ಧನಕ್ಕೆ ಹೆಚ್ಚು ದುಡಿಯುವವರು ಆಶಾ ಕಾರ್ಯಕರ್ತೆಯರು. ಇಂತವರನ್ನು ಗುರುತಿಸಿ ಈಶ್ವರೀಯ ವಿಶ್ವ ವಿದ್ಯಾಲಯದ ಶಾಖೆ ಸನ್ಮಾನಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ಕೆಲಸ ಜಾಸ್ತಿ, ಗೌರವ ಧನ ಕಡಿಮೆ. ಕೆಲಸಕ್ಕೆ ತಕ್ಕ ವೇತನ ನೀಡಬೇಕು ಎಂದು ನಾನು ವಿಧಾನಪರಿಷತ್ ಸದಸ್ಯ ಆಯನೂರು ಮಂಜುನಾಥ ಅವರ ಬಳಿ ಚರ್ಚಿಸಿ ಸರ್ಕಾರದ ಮಟ್ಟದಲ್ಲಿ ಮಾತನಾಡಿ ಎಂದು ಕೇಳಿಕೊಂಡಾಗ ಆಯನೂರು ಮಂಜುನಾಥ ಅವರು ಆರೋಗ್ಯ ಸಚಿವ ಡಾ.ಸುಧಾಕರ್ ಬಳಿ ಚರ್ಚಿಸಿ ವೇತನ ಹೆಚ್ಚು ಮಾಡಿ ಎಂದು ಮನವಿ ಮಾಡಿದ್ದರು ಹಾಗೂ ವಿಧಾನ ಪರಿಷತ್‌ನಲ್ಲಿ ಮಾತನಾಡಿದ್ದರು. ಆದರೆ ಸಚಿವರು ಯಾವುದೇ ಕೆಲಸ ಮಾಡಲಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸಿಪಿಐ ಟಿ.ವಿ.ದೇವರಾಜ್ ಮಾತನಾಡಿ, ನಿಜವಾದ ಸಾಧಕರನ್ನು ಸಮಾಜ ಗುರುತಿಸಬೇಕು. ಆಶಾ ಕಾರ್ಯಕರ್ತೆಯರು ಕೋವಿಡ್ ಸಮಯದಲ್ಲಿ ತಮ್ಮ ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಇಂಜಿನಿಯರ್ ಬಸವರಾಜ್ ಪ್ರಾಸ್ತಾವಿಕ ಮಾತನಾಡಿ, ಕಳೆದ 86 ವರ್ಷಗಳಲ್ಲಿ ಪ್ರಜಾಪಿತ ಈಶ್ವರೀಯ ವಿಶ್ವ ವಿದ್ಯಾಲಯ ದೇಶ ಹಾಗೂ ವಿಶ್ವದಾದ್ಯಂತ ಸ್ಥಾಪನೆಯಾಗಿ ತನ್ನದೇ ಉತ್ತಮ ಕಾರ್ಯ ಮಾಡುತ್ತಾ ಉತ್ತರೋತ್ತರವಾಗಿ ಬೆಳೆಯುತ್ತಿದೆ ಎಂದು ಹೇಳಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ.ಗಿರೀಶ್, ಪ್ರತ್ರಕರ್ತ ವಿಜಯಾನಂದ ಸ್ವಾಮಿ ಮಾತನಾಡಿದರು. ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಮೃತ್ಯುಂಜಯ ಪಾಟೀಲ್ ಉಪಸ್ಥಿತರಿದ್ದರು.

ಶಿಕ್ಷಕ ಪ್ರಕಾಶ್ ಸ್ವಾಗತಿಸಿದರು. ಶಿಕ್ಷಕಿ ಶಾರದಾ ಕಣಗೊಟಗಿ ಪರಿಚಯ ಮಾಡಿದರು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಶಾಖೆಯ ಸಂಚಾಲಕಿ ಜ್ಯೋತಿ ಅಕ್ಕನವರು ನಿರೂಪಿಸಿದರು. ರುದ್ರಮ್ಮ ವಂದಿಸಿದರು.

## ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಈಗಲ್ ಫಿಟ್ನೆಸ್‌ನ ವಿದ್ಯಾರ್ಥಿಗಳಿಗೆ ಪದಕ



ದಾವಣಗೆರೆ, ಜೂ.26- ಕರ್ನಾಟಕ ಕಿಕ್ ಬಾಕ್ಸಿಂಗ್ ಸ್ಪೋರ್ಟ್ಸ್ ಅಸೋಸಿಯೇಷನ್ ಆಶ್ರಯದಲ್ಲಿ 2022 ಈಚೆಗೆ ಮೈಸೂರಿನಲ್ಲಿ ನಡೆದ 2ನೇ ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್-2022ರಲ್ಲಿ ನಗರದ ಈಗಲ್ ಫಿಟ್ನೆಸ್‌ನ ವಿದ್ಯಾರ್ಥಿಗಳು ಕಿಕ್ ಬಾಕ್ಸಿಂಗ್ ವಿಭಾಗದಲ್ಲಿ 3 ಚಿನ್ನ, 4 ಬೆಳ್ಳಿ ಹಾಗೂ 3 ಕಂಚಿನ ಪದಕ ಪಡೆದು ದಾವಣಗೆರೆ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕಿಕ್‌ಲೈಟ್ ಇವೆಂಟ್‌ನ 7-9 ವರ್ಷದ ವಿಭಾಗದಲ್ಲಿ ಯು. ಆದಿತ್ಯ ಮತ್ತು ಎ.ಬಿ. ಅಧಿತಿ ಹಾಗೂ 11-13 ವರ್ಷದ ವಿಭಾಗದಲ್ಲಿ ಎ.ಬಿ. ಅನುಷ ಅವರುಗಳು ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ಕಿಕ್‌ಲೈಟ್ ಇವೆಂಟ್‌ನ 7-9 ವರ್ಷ ವಿಭಾಗದಲ್ಲಿ ಕೆ.ವಿ. ನಿಧಿ ಮತ್ತು 11-13 ವರ್ಷ ವಿಭಾಗದಲ್ಲಿ ಎನ್.ವಿ ಗುಣದೀಪ್, ಲೋ-ಕಿಕ್ ಇವೆಂಟ್‌ನ 13-15 ವರ್ಷ ವಿಭಾಗದಲ್ಲಿ ಆರುಂಧತಿ ಮತ್ತು ಯು. ಆದ್ವಿತಾ ಅವರುಗಳು ಬೆಳ್ಳಿ ಪದಕಕ್ಕೆ ಭಾಜನರಾಗಿದ್ದಾರೆ.

ಕಿಕ್‌ಲೈಟ್ ಇವೆಂಟ್‌ನ 11-13 ವರ್ಷ ವಿಭಾಗದಲ್ಲಿ ಎನ್. ಚಿರಾಯುಷ್, ಎಸ್. ಹೆಚ್. ಸಮರ್ಥ ಮತ್ತು ಮಹಾಂತ್ ಶೇಖರ್ ಅವರುಗಳು ಕಂಚಿನ ಪದಕಕ್ಕೆ ಭಾಜನರಾಗಿದ್ದಾರೆ.

ಈ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಈಗಲ್ ಫಿಟ್ನೆಸ್‌ನ ತರಬೇತುದಾರ ವೆಂಕಿ ಸೆನ್ಸೈ, ವ್ಯವಸ್ಥಾಪಕರಾದ ದೀಕ್ಷಿತ್ ಮತ್ತು ಮಲ್ಲಿ ಕಾರ್ಜುನ್, ಕ್ರೀಡಾ ಪ್ರೋತ್ಸಾಹಕ ಶ್ರೀನಿವಾಸ ದಾಸಕರಿಯಪ್ಪ, ಪಾಲಿಕೆ ಸದಸ್ಯ ಬಿ.ಜಿ. ಅಜಯ್‌ಕುಮಾರ್ ಅಭಿನಂದಿಸಿದ್ದಾರೆ.

## ಬೆಳೆ ವಿಮೆ ಆಕ್ಷೇಪಣೆಗೆ ಅವಕಾಶ


**ಹೊನ್ನಾಳಿ**

ಹೊನ್ನಾಳಿ, ಜೂ.24- ಬೆಳೆ ವಿಮೆ ಯೊಜನೆಯಡಿಯಲ್ಲಿ ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆ ಸಲ್ಲಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ತಾಳೆಯಾಗದ ಕೆಲವೊಂದು ಪ್ರಸ್ತಾವನೆಗಳನ್ನು ಸಂಬಂಧಪಟ್ಟ ವಿಮಾ ಕಂಪನಿಯವರು ತಿರಸ್ಕರಿಸಿ ವಿಮಾ ಮೊತ್ತವನ್ನು ಜಮೆ ಮಾಡಿರುವುದಿಲ್ಲ. ಈ ರೀತಿಯಾಗಿ ಬೆಳೆ ಸಮೀಕ್ಷೆ ವಿವರಗಳೊಂದಿಗೆ ಹೊಂದಾಣಿಕೆ ಯಾಗದೇ ತಿರಸ್ಕೃತಗೊಂಡ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ, ಗ್ರಾಮ ಪಂಚಾಯತ್‌ಗಳಲ್ಲಿ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳಲ್ಲಿ ಪ್ರದರ್ಶಿ ಸಲಾಗಿದೆ. ತಿರಸ್ಕೃತಗೊಂಡ ಪ್ರಸ್ತಾವ ನೆಗಳ ಬಗ್ಗೆ ವಿಮೆ ನೋಂದಾಯಿತ ರೈತರಿಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ 7.07.2022ರ ಒಳಗೆ ಲಿಖಿತ ರೂಪದಲ್ಲಿ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ರೈತರ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ನೀಡುವಂತೆ ಕೋರಲಾಗಿದೆ.

# ನಿತ್ಯ ಯೋಗದಿಂದ ಆರೋಗ್ಯ ಭಾಗ್ಯ




ದಾವಣಗೆರೆ, ಜೂ. 26- ಯೋಗವು ಮನುಷ್ಯನ ಆರೋಗ್ಯಕರ ಜೀವನಕ್ಕೆ ಪೂರಕ. ಯೋಗವನ್ನು ನಿಯಮಿತವಾಗಿ ಮಾಡುವುದರಿಂದ ಹಲವಾರು ಪ್ರಯೋಜನಗಳಿವೆ. ಯೋಗವು ಕೇವಲ ಯೋಗ ದಿನಾಚರಣೆಗೆ ಸೀಮಿತವಾಗದೇ ದಿನವೂ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು.

'ನಿತ್ಯ ಮಾಡಿದರೆ ಯೋಗ, ಲಭಿಸುವುದು ಆರೋಗ್ಯ ಭಾಗ್ಯ' ಎಂದು ಅಂತರರಾಷ್ಟ್ರೀಯ ಯೋಗಪಟು, ರಾಷ್ಟ್ರಪತಿ ಮತ್ತು ಮುಖ್ಯಮಂತ್ರಿಗಳ ಪೊಲೀಸ್ ಪದಕ ವಿಜೇತ ರಾಮಚಂದ್ರ ಬಿ. ಜಾಧವ್ ತಿಳಿಸಿದರು.

ಕೊಂಡಜ್ಜಿಯ ಪೊಲೀಸ್ ಪಬ್ಲಿಕ್ ವಸತಿ ಶಾಲೆಯಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಯೋಗಾಸನಗಳು, ಪ್ರಾಣಾಯಾಮ ಮತ್ತು ಷಟ್‌ಕ್ರಿಯೆಗಳ ಮಹತ್ವ ಸಾರಿದರು.

ವಿದ್ಯಾರ್ಥಿಗಳಿಂದ ಸೂರ್ಯ ನಮಸ್ಕಾರ, ಪ್ರಾಣಾಯಾಮ ಮತ್ತು ಹಲವು ಆಸನಗಳ ಪ್ರದರ್ಶನ ನಡೆಯಿತು. ಪ್ರಾಂಶುಪಾಲ ಯತೀಶ್ ಆಚಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪೊಲೀಸ್ ಇಲಾಖೆಯ ಎಎಸ್‌ಐ ವೀರನಗೌಡರು ಉಪಸ್ಥಿತರಿದ್ದರು.

## ಕಾರ್ಗಿಲ್ ವಿಜಯ ದಿವಸ

ಬಂಧಿಯಾಗಿದ್ದಳು ಭಾರತಮಾತೆ
ಕುತಂತ್ರದ ಕೈ ಕುಣಿಕೆಯಲಿ
ಮೈ ನಡುಗುವ ಹಿಮಚ್ಛಾದಿತ
ಭೂಮಿ ಅಂದು ರಣರಂಗವಾಗಿತ್ತು
ಭಾರತದ ಇಂಚು ಇಂಚು ಜಾಗಕ್ಕೆ
ಸಂಚನು ಮಾಡಿದವರ ಸೊಕ್ಕು ಅಡಗಿಸುವ ಕರ್ತವ್ಯ
ಸೈನಿಕರ ಕರ್ತವ್ಯವಾಗಿತ್ತು

ಒಂದೆಡೆ ಪರ್ವತವೇರುವ ಸೈನಿಕರ ದಂಡು
ಬಂದೂಕಿನ ಸದ್ದಿಗೆ ಎದೆಯೊಡ್ಡಿ ನಿಂತವರ ಹಿಂಡು
ಎದೆ ಸೀಳಿ ರಕ್ತ ಚಿಮ್ಮುವ ಬಂದೂಕಿನ ಸದ್ದು ಒಂದೆಡೆ
ಕೈ ಕಾಲು ಬಿದ್ದರು ಎದ್ದು ಹೊರಡುವ ವೀರರು ಇನ್ನೊಂದೆಡೆ

ವೀರ ಮರಣವ ಹೊಂದಿದವರಿಗೆ ವಂದಿಸುವ ಕೈಗಳು
ನೋವು ತುಂಬಿದ ಜೀವಗಳಿಗೆ ಸಂತೈಸುವ ಕಂಬನಿಗಳು
ಇನ್ನೇನು ಬಂಧಮುಕ್ತಳಾದಳು
ಭರತ ಮಾತೆ ಎನ್ನುವಷ್ಟರಲ್ಲಿ
ಉರುಳಿರುಳಿ ಬಿದ್ದು
ಸಿಡಿದ ಮದ್ದುಗಳ ನಡುವೆ
ಛಿದ್ರವಾದ ದೇಹಗಳು

ತಿಳಿಯಾದ ಕಣಿವೆಯ ನಡುವೆ
ನೀರು ಹರಿಯಬೇಕಾದ ಜಾಗದಲ್ಲಿ
ನೆತ್ತರು ಹರಿಯಿತು
ಶಾಂತವಾಗಿದ್ದ ಭೂಮಿ ಅಂದು
ಕರ್ಕಶವಾಗಿತ್ತು
ವೀರ ಯೋಧರ ನೋವಿನ
ಆರ್ತನಾದ ವಿಜಯ ಕಹಳೆಯಾಗಿತ್ತು
ಭಾರತಾಂಬೆ ಮುಕ್ತಳಾಗಿ
ಕಾರ್ಗಿಲ್ ವಿಜಯ ದಿವಸವೆಂದೆನಿಸಿತು.

**- ಬಸವರಾಜ ಕರುವಿನ, ಬಸವನಾಳು**

## ಪದ್ಮಶ್ರೇಣಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜೂ. 26 - ಸಮಾಜದಲ್ಲಿ ಯಾವುದೇ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ 2022ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗಳಾದ ಪದ್ಮ ವಿಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ಗಣರಾಜ್ಯೋತ್ಸವ ದಿನದ ಹಿಂದಿನ ದಿನದಂದು ಕೇಂದ್ರ ಸರ್ಕಾರದಿಂದ ಪ್ರಕಟಿಸಲಾಗುತ್ತದೆ.

ಕಲೆ, ಸಮಾಜ ಕಾರ್ಯ, ಸಾರ್ವಜನಿಕ ವ್ಯವಹಾರ, ವಿಜ್ಞಾನ ತಾಂತ್ರಿಕ, ತಂತ್ರಜ್ಞಾನ ಮತ್ತು ಇತರೆ ಗೌರವಾನ್ವಿತ ವೃತ್ತಿ, ವ್ಯಾಪಾರ ಮತ್ತು ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ನಾಗರಿಕ ಸೇವೆ, ಕ್ರೀಡೆ, ಅಥ್ಲೆಟಿಕ್ಸ್, ಸಾಹಸ, ಕ್ರೀಡೆ ಮತ್ತು ಯೋಗ ಹಾಗೂ ಇತರೆ ಕ್ಷೇತ್ರಗಳು ಮಾನವ ಹಕ್ಕುಗಳ ಸಂರಕ್ಷಣೆ, ಭಾರತ ಸಂಸ್ಕೃತಿಯ ಪ್ರಚಾರ, ಪರಿಸರ ಸಂರಕ್ಷಣೆ ಮತ್ತು ವನ್ಯಮೃಗ ಸಂರಕ್ಷಣೆ ಒಳಗೊಂಡ ಕ್ಷೇತ್ರಗಳಲ್ಲಿ ಶ್ರೇಷ್ಠತೆ ಗಳಿಸಿ ಅಸಾಧಾರಣ ಕೊಡುಗೆ ನೀಡಿರುವ ವ್ಯಕ್ತಿಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ. 2022ನೇ ಸಾಲಿನ ಪದ್ಮಶ್ರೇಣಿ ಪ್ರಶಸ್ತಿಗಾಗಿ ಅರ್ಜಿಯನ್ನು ಆಹ್ವಾನಿಸಲಾ ಗಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆ ಯನ್ನು ದಾವಣಗೆರೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯ ಜಿಲ್ಲಾ ಕ್ರೀಡಾಂಗಣ ಕಛೇರಿಯಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ನಾಡಿದ್ದು ದಿನಾಂಕ 28 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂ.ಸಂಖ್ಯೆ: 08192-237480 ಸಂಪರ್ಕಿಸಬಹುದಾಗಿದು.

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಭಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
#91/99/537, 'ತರಳಬಾಳು ಕೃಪ', 1ನೇ ಮೇನ್, 5ನೇ ಕ್ರಾಸ್, 'ಎ' ಬ್ಲಾಕ್, ಡಿಸಿಎಂ ಟೌನ್‌ಶಿಪ್ ದಾವಣಗೆರೆ.
94807-12538, 98864-64267

**ಮನೆ ಬಾಡಿಗೆಗೆ ಸಿಗುತ್ತದೆ**
ಎಸ್.ಎಸ್ ಬಡಾವಣೆ 'ಬಿ' ಬ್ಲಾಕ್, 2ನೇ ಮೇನ್, ಡೋರ್ ನಂ. 3843ನಲ್ಲಿ ಎರಡು ಬೆಡ್ ರೂಂ (ಒಂದಕ್ಕೆ ಅಟ್ಯಾಚ್ Toilet) ಇರುವ ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರಿನ ಸೌಕರ್ಯವಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
94839 89839, 93432 04969

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಮನೆಗಳು ಬಾಡಿಗೆಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ 3 ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ.
1/2 ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಟೈಲರಿಂಗ್ ತರಬೇತಿ**
ನಮ್ಮಲ್ಲಿ ಎಲ್ಲಾ ತರಹದ ಲೇಡಿಸ್ ಬಟ್ಟೆಗಳನ್ನು ಹೊಲಿಯಲು ತರಬೇತಿ ಕೊಡಲಾಗುತ್ತದೆ. ಸಂಪರ್ಕಿಸಿ
ಪರಿ ಲೇಡಿಸ್ ಟೈಲರ್
ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, 5ನೇ ಕ್ರಾಸ್, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ.
81051 23563

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಫೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಬಾಡಿಗೆಗೆ**
ಸಿಂಗಲ್ ಬೆಡ್ ರೂಂ ಔಟ್‌ಹೌಸ್ ಗ್ರೌಂಡ್ ಫ್ಲೋರ್, ವಿದ್ಯಾನಗರ, 2ನೇ ಬಸ್ ಸ್ಟಾಪ್ ಹತ್ತಿರ 24x7 ವಾಟರ್, ಉತ್ತರ ಫೇಸ್ ಚಿಕ್ಕ ಕುಟುಂಬ, ಸಸ್ಯಹಾರಿಗಳಿಗೆ ಬಾಡಿಗೆಗೆ ಮಾತ್ರ.
94483 45584

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ, ಶಿವ-ಪಾರ್ವತಿ ಬಡಾವಣೆಯಲ್ಲಿ 30x54 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ. ಹೊಸಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
63647 83999

**WANTED**
Boys required for data entry & billing at Food Mart Supermarket.
Quli : Any Degree
Mob : 98864 63531

**Teachers Wanted**
B.Sc. B.Ed - 2 Posts
B.A. B.Ed - 2 Posts
(with Fluency in English)
Littl Champs School
DCM Town Ship, Davanagere.
80950 08434

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಜ್ಜನ್ ಸೂಪರ್ ಮಾರ್ಟ್
99009 71888

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. P U C or any DEGREE,
ವಿಳಾಸ : ಕಾವೇರಿ ಫಾರ್ಮಾ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ. 577002

**WANTED**
1. Staff Nurses
2. Lab Technician
Pls Contact :
98440 65638

**ಮಾರಾಟಕ್ಕಿದೆ FOR SALE**
2019ರ ಮಾಡೆಲ್‌ನ
Innova
ಕಾರು ಮಾರಾಟಕ್ಕೆ ಇದೆ.
ಆಸಕ್ತರು ಸಂಪರ್ಕಿಸಿ.
72599 83162

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ/JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
ಸಂಪರ್ಕಿಸಿ:
97432 17566
91084 18233

**ಮನೆ ಮತ್ತು ಕಾಂಪ್ಲೆಕ್ಸ್ ಮಾರಾಟಕ್ಕಿದೆ**
ಬಾಲಾಜಿ ಬಡಾವಣೆಯಲ್ಲಿ 40 ಅಡಿ ರೋಡ್‌ಗೆ ಪೂರ್ವ-ಉತ್ತರ ಕಾರ್ನರ್ ಸೈಟ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 8 ಚದುರ ಕಾಂಪ್ಲೆಕ್ಸ್ ಮತ್ತು ಕಾರ್ ಪಾರ್ಕಿಂಗ್ ಫಸ್ಟ್ ಫ್ಲೋರ್‌ನಲ್ಲಿ 13 ಚದುರದ 2 ಬೆಡ್ ರೂಂನ ಹೊಸ ವಾಸದ ಮನೆ ಮಾರಾಟಕ್ಕಿದೆ.
98448 82366

**WANTED**
Sales Executive
Qualification : Any Degree
Contact : SBL Batteries
Vinobha nagar, 3rd Main Corner, P.B Road, Davanagere.
M : 99019 08586

**WANTED**
Female Telecallers -10 No.s
(Any Graduate : Fresher / Experianced)
communication skill is must Contact.
Kesari Technologies
#2756/6, 3rd Main, 4th Cross, MCC `B' Block, Davanagere-577004
M : 97433 41341

**ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ ಮತ್ತು ರಾಣೇಬೆನ್ನೂರು ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವೀಸ್.
ಮುಸ್ಲಿಂ ಹಾಸ್ಟೆಲ್, ದಾವಣಗೆರೆ
78990 15677, 96113 94063

**ಸೂರ್ಯ ನಮೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ)
ತರಗತಿಗಳು ಈಗಷ್ಟೇ ಪ್ರಾರಂಭವಾಗುತ್ತಿವೆ. ಸ್ಥಳ. K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ. ಸಮಯ ಬೆಳಿಗ್ಗೆ 6.15 ರಿಂದ 7.45
ಸ್ಥಳ : ಕಾಮ್ರೆಡ್ ಲೆನಿನ್ ಶಾಲೆ ಡಾಂಗೆ ಪಾರ್ಕ್ ಹತ್ತಿರ, ದಾವಣಗೆರೆ. ಸಮಯ ಸಂಜೆ 5.15 ರಿಂದ 6.45
ಶ್ರೀ ಸುರೇಶ್ ಸಿ. ಮುರಗಿ Msc. B.Ed
99028 24909, 98447 48763

**PG for LADIES**
Food + Accommodation
Attached bathrooms
Nearer to Railway station & Bus Stand. Nearer to PU & Degree Colleges
P.J Extension, Davanagere.
79753 18618, 79753 12143

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ಬೇಕಾಗಿದ್ದಾರೆ**
ಬೇಕರಿ ಉತ್ಪನ್ನಗಳಾದಂತಹ ಖಾರಾ, ಹೆಸರು ಬೇಳೆ, ಮಸಾಲೆ ಶೇಂಗಾ, ಮಸೂರ್ ಬೇಳೆ, ಕಾಬೂಲಿ ಕಡ್ಲೆ ಬಟಾಣಿ ಈ ತರಹದ ಕರಿದ ಬೇಕರಿ ಆಹಾರ ಉತ್ಪನ್ನಗಳನ್ನು ತಯಾರಿಸಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.
ಆಸಕ್ತರು ಕೂಡಲೇ ಸಂಪರ್ಕಿಸಿ :
80885 46788

**WANTED**
Wanted for
Mathematics teacher
to teach a 2nd PUC
Supllementary student.
98869 97892, 91485 96892

**WANTED**
WORKING PHARMACIST
Qualification : D. Pharma/B. Pharma, Salary Scale : Rs.12000 to 16000
Darshan Gowda: Address : Kaveri Medihouse (P) Ltd Near Chethana Hotel, P.J Extension, Davangere.
M : 9035503140

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಅಡುಗೆಯವರು ಬೇಕಾಗಿದ್ದಾರೆ**
ಮಾಂಸದೂಟದ ಅಡುಗೆ ಮಾಡುವವರು, ಉತ್ತರ ಭಾರತೀಯ ಅಡುಗೆಯವರು ಮತ್ತು ತಂದೂರಿ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ:
95354 44369

**ಯುಕ್ತ ಕೌಶಲ್ಯ ತರಬೇತಿ ಕೇಂದ್ರ**
ಹಾಗೂ ಕಲರ್ಸ್ ಟೆಕ್ನಾಲಜಿ ಇವರುಗಳ ಸಹಯೋಗದಿಂದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಅರ್ಜಿ ಆಹ್ವಾನ
https://forms.gle/eJceAjgM4Mu6Fc887
ಕೊನೆಯ ದಿನಾಂಕ. 30.6.2022 ಹೆಚ್ಚಿನ ಮಾಹಿತಿಗಾಗಿ
87470 68888, 63662 73089
88677 54672

**II PU TUITION SUPPLEMENTARY**
SCIENCE COMMERCE 100% Result
K-CET, NEET
Long Term Coaching
WINNERS CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892, 9148596892

**SPECIAL COACHING**
PUC Failed Students 100% Result
K-CET, NEET
Long Term Coaching
Hostel Facility Available
SINCHAN COACHING CENTER
Near SBI ATM, Ram & Co Circle, Davangere
8861445913, 9019580600

**ಭವಿಷ್ಯ Astrologer**
ಹಂಪನಾಳ್ ಮೋಡಿ ಮಾಂತ್ರಿಕ ಗಿಡ್ಡಪ್ಪ
ನಂಬಿದಲ್ಲಿ ಮೋಸವಿಲ್ಲ ಭಟ್ಟಂಗಿ ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ.ವಶೀಕರಣ, ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ, ಮಾಟ-ಮಂತ್ರ, ಆರೋಗ್ಯ, ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ, ಅಂಗುಷ್ಠ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ.
9980770791

**ಶ್ರೀ ಭೌಲಿ ದೇವಿ ಜೋತಿಷ್ಯರು**
ಪಂ. ಆತ್ಮಾನಂದ ರಾವ್ ಶ್ರೀ ಭೌಲಿ ಭೂತರಾಯ ದೇವಿಯ ಆರಾಧಕರು. ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ.ಸೂ: ಸ್ತ್ರೀ-ಪುರುಷ ವಶೀಕರಣ, ಕೇವಲ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
82176 83615

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**SSLC/PUC/ITI/Degree ಪಾಸ್-ಫೇಲ್ ಮುಂದೇನು...**
ಡಿಪ್ಲೋಮಾ ಇನ್ ಪೇಷೆಂಟ್‌ಕೇರ್ ನರ್ಸಿಂಗ್-2 ವರ್ಷ, ಕೇವಲ 6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡುವ ಅವಕಾಶ. ಉಚಿತ ಯುನಿಫಾರ್ಮ್ & ಪುಸ್ತಕ ಸಂಪರ್ಕಿಸಿ : ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

## 25 ಕೆಜಿಗೂ ಅಧಿಕ ಅಕ್ರಮ ಗಾಂಜಾ ನಾಶ



ದಾವಣಗೆರೆ, ಜೂ.26- ಅಂತರ ರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ಇಂದು ಕಳೆದ ಒಂದು ವರ್ಷದಲ್ಲಿ ವಶಪಡಿಸಿಕೊಂಡಿದ್ದ 11 ಪ್ರಕರಣಗಳಿಗೆ ಸೇರಿದ ಒಟ್ಟು 25 ಕೆಜಿ 800 ಗ್ರಾಂ ಅಕ್ರಮ ಗಾಂಜಾವನ್ನು ಸುಟ್ಟು ನಾಶಪಡಿಸಲಾಯಿತು.

ನ್ಯಾಯಾಲಯದ ಅನುಮತಿ ಪಡೆದು ನಗರದ ಹೊರ ವಲಯದಲ್ಲಿ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ನೇತೃತ್ವದಲ್ಲಿ ಬೆಂಕಿಯಲ್ಲಿ ಹಾಕಿ ನಾಶಪಡಿಸಲಾಯಿತು.

ಜೂನ್ 26 ಪ್ರತಿ ವರ್ಷ ಮಾದಕ ದ್ರವ್ಯ ವಿರೋಧಿ ದಿನಾಚರಣೆ. ಈ ಹಿನ್ನೆಲೆಯಲ್ಲಿ ಗಾಂಜಾವನ್ನು ನಾಶಪಡಿಸಲಾಗಿದೆ. ಜಿಲ್ಲೆಯಲ್ಲಿ ಮಾದಕ ವಸ್ತು ಮಾರಾಟ ಮತ್ತು ಸೇವನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ಇಂತಹ ಚಟುವಟಿಕೆಗಳಿಗೆ ಇನ್ನು ಮುಂದೆ ಆಸ್ಪದ ನೀಡುವುದಿಲ್ಲ ಎಂದು ಎಸ್ಪಿ ರಿಷ್ಯಂತ್ ತಿಳಿಸಿದ್ದಾರೆ.

ಮಾದಕ ವಸ್ತು ಮಾರಾಟ ಜಾಲದಲ್ಲಿದ್ದವರ ಮತ್ತು ಸೇವಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಇನ್ನು ಮುಂದೆ ಯಾರೂ ಕೂಡ ಈ ರೀತಿಯ ಪ್ರಕರಣಗಳಲ್ಲಿ ಭಾಗವಹಿಸಬಾರದು ಎಂದು ಎಚ್ಚರಿಕೆ ನೀಡಿದ್ದಾರೆ.

ಮುಖ್ಯವಾಗಿ ಕಾಲೇಜು ವಿದ್ಯಾರ್ಥಿಗಳು ಈ ರೀತಿಯ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದೇ ಉತ್ತಮ ಜೀವನ ನಡೆಸುವಂತೆ ಕರೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್. ಬಿ. ಬಸರಗಿ, ಡಿಸಿಆರ್ ಬಿ ಡಿವೈಎಸ್ಪಿ ಬಿ.ಎಸ್. ಬಸವರಾಜ್, ಚನ್ನಗಿರಿ ಡಿವೈಎಸ್ಪಿ ಕೆ.ಎಂ. ಸಂತೋಷ್ ಸೇರಿದಂತೆ, ಸಿಬ್ಬಂದಿಗಳು ಇದ್ದರು.

## ದೈವಜ್ಞ ಸೊಸೈಟಿ ಶೀಘ್ರ ಬ್ಯಾಂಕ್ ಆಗಿ ಪರಿವರ್ತನೆಯಾಗಲಿ



**ಸೊಸೈಟಿಯ ರಜತ ಮಹೋತ್ಸವ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ದೈವಜ್ಞ ಸಮಾಜದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಸ್ವಾಮೀಜಿ ಆಶಯ**

ದಾವಣಗೆರೆ, ಜೂ. 26- ಸ್ಥಳೀಯ ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿಯು ಇದೀಗ ರಜತ ಮಹೋತ್ಸವದ ಸಂಭ್ರಮದಲ್ಲಿದ್ದು, ಮುಂದಿನ ದಿನಗಳಲ್ಲಿ ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ, ಶತಮಾನೋತ್ಸವವನ್ನು ಆಚರಿಸುವಂತಾಗಲಿ ಎಂದು ಶ್ರೀ ಜ್ಞಾನೇಶ್ವರಿ ಪೀಠದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ನಗರದ ನರಹರಿ ಶೇಟ್ ಸಭಾ ಭವನದಲ್ಲಿ ದೈವಜ್ಞ ಬ್ರಾಹ್ಮಣ ಸಮಾಜದ ವತಿಯಿಂದ ಆಯೋಜಿಸಿದ್ದ ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವ ಕಟ್ಟಡದ ಉದ್ಘಾಟನೆ ಹಾಗೂ ದೈವಜ್ಞ ಕೈಪಿಡಿ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪ್ರಗತಿಯ ಹಾದಿಯಲ್ಲಿರುವ ದೈವಜ್ಞ ಪತ್ತಿನ ಸಹಕಾರ ಸಂಘ ಶೀಘ್ರವೇ ಬ್ಯಾಂಕ್ ಆಗಿ ಪರಿವರ್ತನೆಯಾಗಲಿ. ದೈವಜ್ಞ ಸಮಾಜದ ಮಕ್ಕಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯ, ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ ಮುನ್ನಡೆಸುವ ನಿಟ್ಟಿನಲ್ಲಿ ಸದೃಢವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ಅಂಗವಿಕಲರಿಗೆ ಪರಿಕರಗಳನ್ನು, ಸಮಾಜದ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ, ಕೊರೊನಾದಂತಹ ಸಂಕಷ್ಟದ ಸಮಯದಲ್ಲಿ ಆಹಾರದ ಕಿಟ್‌ಗಳನ್ನು ನೀಡುವ ಮೂಲಕ ಜನೋಪಯೋಗಿ ಕೆಲಸಗಳನ್ನು ಮಾಡುತ್ತಾ ಬಂದಿರುವುದು ಶ್ಲಾಘನೀಯ ಎಂದರು.

ಸಮಾಜ ಶ್ರೀಮಂತವಾಗಬೇಕು ನಿಜ, ಅದರಂತೆಯೇ ಸುಸಂಸ್ಕೃತ ಸಮಾಜವಾಗುವುದು ಅತಿ ಮುಖ್ಯ. ಇದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದು ಹೇಳಿದರು.


ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಶಂಕರ್ ಎನ್. ವಿಠಲಕರ್ ಮಾತನಾಡಿ, 1997 ರಲ್ಲಿ ಪ್ರಾರಂಭವಾದ ಸೊಸೈಟಿಯು ಅಭಿವೃದ್ಧಿಯತ್ತ ಸಾಗುತ್ತಿದ್ದು, ಅಧ್ಯಕ್ಷ ಪ್ರಶಾಂತ ವಿ. ವೆರ್ಣೇಕರ್ ಮತ್ತು ಸಮಿತಿ ಸದಸ್ಯರ ಸಹಕಾರ ಕಾರಣ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ದೈವಜ್ಞ ಸಮಾಜದ ರಾಜ್ಯಾಧ್ಯಕ್ಷ ರಾಮು ರಾಯ್ಕರ್ ಮಾತನಾಡಿ, ದೈವಜ್ಞ ಪತ್ತಿನ ಸಹಕಾರ ಸಂಘ ರಜತ ಮಹೋತ್ಸವ ಕಟ್ಟಡ ನಿರ್ಮಿಸಿರುವುದು ಅತ್ಯಂತ ಸ್ತುತ್ಯಾರ್ಹ. ಇನ್ನೂ ಹೆಚ್ಚು ಶಾಖೆಗಳಾಗಿ ಪ್ರಗತಿಯತ್ತ ಸಾಗಲಿ ಎಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸೊಸೈಟಿ ಅಧ್ಯಕ್ಷ ಪ್ರಶಾಂತ್ ವೆರ್ಣೇಕರ್, ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಕಾರವಾರದ ಮಾಜಿ ಶಾಸಕ ಗಂಗಾಧರ ಭಟ್, ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ಸತ್ಯನಾರಾಯಣ ಆರ್. ರಾಯ್ಕರ್ ಮಾತನಾಡಿದರು.

ಕಾರ್ಯದರ್ಶಿ ವಿಠಲ್ ಭಟ್ ಆವಾಜಿ, ಸೊಸೈಟಿ ಉಪಾಧ್ಯಕ್ಷ ರಾಜೀವ್ ವಿ. ವೆರ್ಣೇಕರ್, ಶಿವಮೊಗ್ಗದ ವಿನಯಾ ಆರ್. ರಾಯ್ಕರ್, ವಾಸುದೇವ ರಾಯ್ಕರ್, ರಾಘವೇಂದ್ರ ಎನ್. ದಿವಾಕರ್, ರಾಘವೇಂದ್ರ ಎಸ್. ಕುರ್ಡೇಕರ್, ವಿಜಯ ಎಸ್. ವಿಠಲಕರ್, ಶ್ವೇತ ಜಿ. ಶೇಟ್, ಮಂಜುನಾಥ್ ವಿ. ಕುಡತರ್‌ಕರ್, ದೀಪಕ್ ಎನ್. ಶೇಟ್, ಸತೀಶ್ ಎಸ್. ಸಾನು, ಚಂದ್ರಹಾಸ ಕುರ್ಡೇಕರ್, ಸೊಸೈಟಿ ವ್ಯವಸ್ಥಾಪಕರಾದ ಆರ್. ಸುಮನಾ ಮತ್ತಿತರರು ಉಪಸ್ಥಿತರಿದ್ದರು.

## ನಿವೃತ್ತ ನೌಕರರ ಸಂಘದ ಚುನಾವಣೆ ಉಜ್ಜನಪ್ಪ ಗುಂಪಿಗೆ ಅಧಿಕ ಸ್ಥಾನ



ದಾವಣಗೆರೆ, ಜೂ.26- ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಆಡಳಿತ ಮಂಡಳಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಎ.ಆರ್. ಉಜ್ಜನಪ್ಪ ನೇತೃತ್ವದ ಗುಂಪಿಗೆ ಅತ್ಯಧಿಕ ಸ್ಥಾನಗಳು ಲಭಿಸಿವೆ.

ಎ.ಆರ್. ಉಜ್ಜನಪ್ಪ ನೇತೃತ್ವದ 8 ಜನರು ಡಾ. ಹೆಚ್.ಎಂ. ವೀರಯ್ಯ ಗುಂಪಿನ ಐವರು ಚುನಾಯಿತಗೊಂಡಿದ್ದು, ಇದರಿಂದಾಗಿ ಸಂಘದ ಹಾಲಿ ಆಡಳಿತ ಮಂಡಳಿಯ ಗುಂಪಿನ ಸದಸ್ಯರು ಮತ್ತೊಂದು ಅವಧಿಗೆ ಚುಕ್ಕಾಣಿ ಹಿಡಿದಂತಾಗಿದೆ.

ಸಿ.ಜಿ. ಕಲ್ಲಪ್ಪ (526), ಎ.ಆರ್. ಉಜ್ಜನಪ್ಪ (520), ಡಾ. ಹೆಚ್. ಎಂ. ವೀರಯ್ಯ (518), ಎಸ್. ಗುರುಮೂರ್ತಿ (513), ಕೆ.ಜಿ. ಭರತ ರಾಜ್ (492), ಬಿ.ದಿಳ್ಳೆಪ್ಪ (490), ಕೆ. ನಾಗಪ್ಪ (464), ಎಸ್.ಎಂ. ವೀರಯ್ಯ (459), ಬಿ.ಕೆ. ರೇಣುಕಮೂರ್ತಿ (458), ಬಿ.ಎಂ. ಮಲ್ಲಿಕಾರ್ಜುನಯ್ಯ (450), ಎನ್. ಮಹೇಶ್ವರಪ್ಪ (439), ಎನ್.ಜಿ. ಬಸವರಾಜ್ (436), ಕೆ. ದೇವೇಂದ್ರಪ್ಪ (432) ಅವರು ಅತ್ಯಧಿಕ ಮತಗಳನ್ನು ಗಳಿಸಿ ಚುನಾಯಿತಗೊಂಡಿದ್ದಾರೆ.

ಆಯ್ಕೆಗೊಂಡಿರುವ 13 ಜನರ ಪೈಕಿ ಎ.ಆರ್. ಉಜ್ಜನಪ್ಪ, ಕೆ.ಜಿ. ಭರತರಾಜ್, ಎಸ್. ಗುರುಮೂರ್ತಿ, ಎನ್.ಜಿ. ಬಸವರಾಜ್, ಬಿ.ಎಂ. ಮಲ್ಲಿಕಾರ್ಜುನಯ್ಯ, ಡಾ. ಹೆಚ್. ಎಂ. ವೀರಯ್ಯ, ಎಸ್.ಎಂ. ವೀರಯ್ಯ, ಸಿ.ಜಿ. ಕಲ್ಲಪ್ಪ, ಬಿ.ಕೆ. ರೇಣುಕಮೂರ್ತಿ ಅವರುಗಳು ಇನ್ನೊಂದು ಅವಧಿಗೆ ನಿರ್ದೇಶಕರಾಗಿ ಪುನರಾಯ್ಕೆಗೊಂಡಿದ್ದರೆ, ಬಿ. ದಿಳ್ಳೆಪ್ಪ, ಎನ್. ಮಹೇಶ್ವರಪ್ಪ, ಕೆ. ನಾಗಪ್ಪ, ಕೆ.ದೇವೇಂದ್ರಪ್ಪ ಅವರುಗಳು ಇದೇ ಪ್ರಥಮ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಜಿ.ಪರಮೇಶ್ವರಪ್ಪ, ಕೆ.ಸಿ. ಮರುಳಸಿದ್ದಪ್ಪ, ಡಿ.ಎಂ. ರಾಜಪ್ಪ, ಟಿ.ಎಂ. ರುದ್ರಯ್ಯ, ಪಿ.ಸಿ. ರೇವಣಪ್ಪ, ಎಂ.ಕೃಷ್ಣಮೂರ್ತಿ, ಬಿ.ಎಂ. ಗಡ್ಡದಗೂಳಿ, ಯು. ಗುರುಸ್ವಾಮಿ, ಎ.ಡಿ. ತಿಪ್ಪೇಸ್ವಾಮಿ, ಎನ್.ಎನ್. ಮರಿಗೌಡರ್, ಜೆ.ಆರ್. ಮೋಹನ್ ಕುಮಾರ್, ಜಿ.ಸಿ. ಸಿದ್ದಪ್ಪ, ಎನ್.ಕೆ. ಸುಧಾಕರ್ ಮತ್ತು ಕೆ.ಪಿ. ಬಸವರಾಜಪ್ಪ ಪರಾಭವಗೊಂಡಿದ್ದಾರೆ. ಸಂಘದ ಆಡಳಿತ ಮಂಡಳಿಯ ಒಟ್ಟು 13 ಸ್ಥಾನಗಳಿಗೆ ಆಯ್ಕೆ ಬಯಸಿ 27 ಜನರು ಸ್ಪರ್ಧೆ ಮಾಡಿದ್ದರು. ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ ಈ ಚುನಾವಣೆಯಲ್ಲಿ ಕೆ. ಜಿ. ಗುರುಶಾಂತಪ್ಪ ಅವರು ಚುನಾವಣಾಧಿಕಾರಿಯಾಗಿ, ವೈ. ಎಚ್. ಕಲ್ಲುಕುಟಿಗಾರ್ ಸಹಾಯಕ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

## ನದಾಫ್ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ದಾವಣಗೆರೆ, ಜೂ.26- ಕರ್ನಾಟಕ ರಾಜ್ಯ ನದಾಫ್/ಪಿಂಜಾರ್ ಸಂಘ ಇವರ ವತಿಯಿಂದ 2021-2022ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚಿನ ಅಂಕ ಗಳಿಸಿ ಉತ್ತೀರ್ಣರಾದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ದಾವಣಗೆರೆ ವಿಭಾಗದಿಂದ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು ಜಿಲ್ಲೆಯ ಪಿಂಜಾರ್, ನದಾಫ್ ಸಮಾಜದ ವಿದ್ಯಾರ್ಥಿಗಳು ಡಿ.ಬಿ.ಹಸೇನ್ ಪೀರ್ ಮೊ: 9880077044, ಎಂ.ಶೌಕತ್ ಅಲಿ ಮೊ: 9844455900 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

## ಕಲಾವಿದರೇ ದೇಶದ ನಿಜವಾದ ಸಂಪತ್ತು



**ಡಾ. ಪುನೀತ್ ನುಡಿ ನಮನ ಕಾರ್ಯಕ್ರಮದಲ್ಲಿ ಬಸವಪ್ರಭು ಸ್ವಾಮೀಜಿ**

ದಾವಣಗೆರೆ, ಜೂ.26- ಕಲಾವಿದರೇ ದೇಶದ ನಿಜವಾದ ಸಂಪತ್ತು ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ಗಾನಸುಧೆ ಕಲಾ ಬಳಗ, ದಾವಣಗೆರೆ ಫ್ರೆಂಡ್ಸ್ ಮೆಲೋಡಿ ಆರ್ಕೆಸ್ಟ್ರಾ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಮಧ್ಯಾಹ್ನ ಹಮ್ಮಿಕೊಳ್ಳಲಾಗಿದ್ದ 'ಕರ್ನಾಟಕ ರತ್ನ ಡಾ.ಪುನೀತ್ ರಾಜ್ ಕುಮಾರ್ ಅವರಿಗೆ ಗೀತ ನುಡಿ ನಮನ' ಮತ್ತು ಸುಗಮ ಸಂಗೀತ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಡಿಗೆ ಕೊಡುಗೆ ನೀಡಿದ ಕಲಾವಿದರು ಸದಾಕಾಲವೂ ಜನರ ಹೃದಯದಲ್ಲಿ ಶಾಶ್ವತವಾಗಿರುತ್ತಾರೆ. ಬೃಹತ್ ಕಟ್ಟಡಗಳು, ಖನಿಜ, ಹಣ ಬಂಗಾರ ಮಾತ್ರ ದೇಶದ ಸಂಪತ್ತಲ್ಲ, ಕಲಾವಿದರೇ ನಿಜವಾದ ಸಂಪತ್ತು ಎಂದು ಪ್ರತಿಪಾದಿಸಿದರು.

ಸರ್ಕಾರ, ಸಂಘ-ಸಂಸ್ಥೆಗಳು ಸೇರಿದಂತೆ ಪ್ರತಿಯೊಬ್ಬರು ಕಲಾವಿದರಿಗೆ ಸಹಾಯ, ಸಹಕಾರ ನೀಡಬೇಕು. ಆ ಮೂಲಕ ಕಲೆಗೆ ಪ್ರೋತ್ಸಾಹಿಸಬೇಕು ಎಂದು ಶ್ರೀಗಳು ಕರೆ ನೀಡಿದರು.

ಇತ್ತೀಚೆಗೆ ರಷ್ಯಾ-ಉಕ್ರೇನ್ ಯುದ್ಧ ನಡೆಯಿತು. ಉಕ್ರೇನ್ ದೇಶದ ಬೃಹತ್ ಕಟ್ಟಡಗಳು ನಾಶವಾದವು. ನಾಶವಾದ ಬೃಹತ್ ಕಟ್ಟಡಗಳನ್ನು ಮತ್ತೆ ನಿರ್ಮಿಸಬಹುದು. ಆದರೆ ಒಬ್ಬ ಕಲಾವಿದನನ್ನು ಪುನಃ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಪುನೀತ್ ರಾಜ್‌ಕುಮಾರ್ ಜನಪ್ರಿಯ ನಟ ಮಾತ್ರವಲ್ಲ, ಅವರು ಮಾಡಿದ ಸೇವೆ, ಉತ್ತಮ ಕಾರ್ಯಗಳ ಮೂಲಕ ಎಲ್ಲರ ಹೃದಯದಲ್ಲಿ ಉಳಿದಿದ್ದಾರೆ. ಉಸಿರು ಹೋದರೂ, ಹೆಸರು ಉಳಿದಿರುವುದಕ್ಕೆ ಅವರು ಮಾಡಿದ ಕಾರ್ಯಗಳೇ ಸಾಕ್ಷಿ ಎಂದು ಶ್ರೀಗಳು ನುಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, 46 ವರ್ಷಗಳ ಕಾಲ ತಂದೆಯ ಮಾರ್ಗದರ್ಶನದಲ್ಲಿ ಕಲಾ ಸೇವೆ ಸಲ್ಲಿಸಿ ಮರೆಯಾದ ಪುನೀತ್ ರಾಜ್‌ಕುಮಾರ್ ಜನರ ಹೃದಯದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ನಾಡು ಅವರನ್ನು ಸದಾ ಸ್ಮರಿಸುತ್ತಿದೆ ಎಂದರು.

ಪುನೀತ್ ಮತ್ತೆ ಹುಟ್ಟಿ ಬರಲಿ ಎಂದು ಆಶಿಸಿದ ಅವರು, ಪುನೀತ್ ಅವರ ಹೆಸರು ಅಜರಾಮರವಾಗಿ ಉಳಿಯಲು ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳಲಿ ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ ಯುವಜತೆಗೆ, ರಾಜಕಾರಣಿಗಳಿಗೆ ಪುನೀತ್ ಮಾದರಿಯಾಗಿದ್ದಾರೆ. ಸಣ್ಣ ಸೇವೆ ಮಾಡಿದರೂ ಪ್ರಚಾರ ಪಡೆಯುವವರ ನಡುವೆ ಯಾವ ಪ್ರಚಾರವೂ ಇಲ್ಲದೆ ಸಾಕಷ್ಟು ಜನರಿಗೆ ಸಹಾಯ ಮಾಡಿದ್ದ ಪುನೀತ್ ಕಾರ್ಯ ಶ್ಲಾಘನೀಯ. ಅವರು ಮಾಡಿದ ಕಾರ್ಯಗಳಲ್ಲಿ ಶೇ.10ರಷ್ಟನ್ನಾದರೂ ಮಾಡಿದರೆ ಜೀವನ ಸಾರ್ಥಕವಾಗುತ್ತದೆ ಎಂದರು.

ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಜ್ಞಾನ ಸಾಗರ ಪಿಯು ಕಾಲೇಜು ಸಂಸ್ಥಾಪಕ ಕಾರ್ಯದರ್ಶಿ ಬಸವರಾಜ್ ಸಾಗರ್ ಅಧ್ಯಕ್ಷತೆ ವಹಿಸಿದ್ದರು. ಗಾನಸುಧೆ ಕಲಾ ಬಳಗದ ಗೌರವಾಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ಸ್ವಾಗತಿಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕರುನಾಡ ಸಮರ ಸೇನೆ ಮಹಿಳಾ ಜಿಲ್ಲಾಧ್ಯಕ್ಷೆ ಮಾಲಾ ನಾಗರಾಜ್, ಬಳಗದ ಅಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಟಿ.ಪರಮೇಶ್, ಹಾಲೇಶ್ ನಲ್ಕುಂದ, ಮಧುಸೂದನ್ ಹಾಗು ಇತರರು ಉಪಸ್ಥಿತರಿದ್ದರು. ವಿಜಯ್ ಕುಮಾರ್ ಪ್ರಾರ್ಥಿಸಿದರು. ಕರಿಬಸವರಾಜ್ ನಿರೂಪಿಸಿದರು.

## ದಾವಣಗೆರೆ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಸಭೆ

**ನಗರದಲ್ಲಿ ಇಂದು**

ದಕ್ಷಿಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಏರ್ಪಾಡಾಗಿರುವ ಜಿಲ್ಲಾ ಮುಖಂಡರ ಹಾಗೂ ಕಾರ್ಯಕರ್ತರ ಸಭೆಯನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಉದ್ಘಾಟಿಸಲಿದ್ದಾರೆ. ದಕ್ಷಿಣ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಸಗೋಡು ಜಯಸಿಂಹ ಅವರು ಉಪಸ್ಥಿತರಿರುತ್ತಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ವಿಧಾನ ಪರಿಷತ್ ಸದಸ್ಯರಾದ ಕೆ.ಅಬ್ದುಲ್ ಜಬ್ಬಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಜಿ.ಸಿ.ನಿಂಗಪ್ಪ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಭಾಗವಹಿಸುವರು ಎಂದು ದಾವಣಗೆರೆ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಿ.ಎಂ. ಈಶ್ವರ್ ತಿಳಿಸಿದ್ದಾರೆ.

## ಪಿಯುಸಿ : 100ಕ್ಕೆ 100 ಅಂಕ ಪಡೆದು ಸಾಧನೆ

**ಹರಪನಹಳ್ಳಿ**

ಹರಪನಹಳ್ಳಿ, ಜೂ.26- ತಾಲ್ಲೂಕಿನ ಅರಸೀಕೆರೆಯ ಎಸ್.ಎಂ.ಸಿ.ಕೆ. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕು. ವಿದ್ಯಾ. ಎಚ್. ಅರ್ಥಶಾಸ್ತ್ರದಲ್ಲಿ 100 ಅಂಕ, ಲೆಕ್ಕಶಾಸ್ತ್ರದಲ್ಲಿ 100 ಮತ್ತು ಶಾಂತಕುಮಾರ್ ಭೂಗೋಳಶಾಸ್ತ್ರದಲ್ಲಿ 100 ಅಂಕಗಳನ್ನು ಪಡೆದು ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತಂದಿದ್ದಾರೆ. ಎಚ್. ವಿದ್ಯಾ 565 ಅಂಕ ಪಡೆದು ಪ್ರಥಮ, ದ್ವಿತೀಯ ಸ್ಥಾನ ಬಿ.ಕೆ. ಐಶ್ವರ್ಯ 554 ಅಂಕ, ತೃತೀಯ ನರಸಮ್ಮ 549 ಅಂಕ ಪಡೆದಿದ್ದಾರೆ. ಎಂ.ಶಾಂತಕುಮಾರ್ 547, ಚೈತನ್ಯ 541, ಚಿರಂಜೀವಿ 528, ರಮೇಶ್ 525, ಐಶ್ವರ್ಯ. ಕೆ 524 ಅಂಕ ಪಡೆದಿದ್ದಾರೆ. 37 ಪ್ರಥಮ, 15 ವಿದ್ಯಾರ್ಥಿಗಳು ದ್ವಿತೀಯ ಸ್ಥಾನದಲ್ಲಿ ಪಾಸಾಗಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಜಿ.ಬಿ.ಹಾವೇರಿ ತಿಳಿಸಿದ್ದಾರೆ.

## ದಾವಣಗೆರೆಗೆ ಚಿನ್ನದ ಕಿರೀಟ ತೊಡಿಸಿದ ಗಿರೀಶ್



ಮಲೇಬೆನ್ನೂರು, ಜೂ.26- ದಾವಣಗೆರೆ ಸ್ಪೋರ್ಟ್ಸ್ ಹಾಸ್ಟೆಲ್‌ನ ಬಿ.ಎ. ಪದವಿಯ ಮೂರನೇ ವರ್ಷದ ವಿದ್ಯಾರ್ಥಿ ಬಿ. ಗಿರೀಶ್ ಅವರು ಭಾನುವಾರ ಚೆನ್ನೈನಲ್ಲಿ ಜರುಗಿದ 'ಕುಮಾರ ಪಾಲ್ಯಂ ತಮಿಳುನಾಡು ಸೌತ್ ಇಂಡಿಯಾ ಕುಸ್ತಿ ಚಾಂಪಿಯನ್ ಶಿಪ್ 2022' ರ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿದ್ದಾನೆ.

ಹರಿಹರ ತಾಲ್ಲೂಕು ಗುತ್ತೂರಿನ ನೀಲಮ್ಮ ಮತ್ತು ಬಸಪ್ಪ ಇವರ ಪುತ್ರ ಗಿರೀಶ್ ಅವರು, ದಾವಣಗೆರೆ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ದೇವರಾಜ ಅರಸ್ ಕಾಲೇಜಿನಲ್ಲಿ ಬಿ.ಎ. ಪದವಿಯ ಮೂರನೇ ವರ್ಷದಲ್ಲಿ ಓದುತ್ತಿದ್ದಾರೆ. ಕುಸ್ತಿ ತರಬೇತುದಾರ ಶಿಕ್ಷಕ ಶಿವಾನಂದ್ ಅವರ ಗರಡಿಯಲ್ಲಿ ಪಳಗಿದ್ದಾರೆ. ದಾವಣಗೆರೆಗೆ ಚಿನ್ನದ ಕಿರೀಟ ಮುಡಿಗೇರಿಸಿದ ಹಾಗೂ ಗಂಗಾಮತಸ್ಥ ಸಮಾಜದ ಹೆಮ್ಮೆಯ ಪುತ್ರ ಗಿರೀಶ್.

ಅವರು ಈ ಹಿಂದೆ ಥೈಲ್ಯಾಂಡ್‌ನಲ್ಲಿ ನಡೆದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ, 23 ಅಂಡರ್ ನ್ಯಾಷನಲ್ ಸ್ಟೇಟ್ ಕುಸ್ತಿ ಸ್ಪರ್ಧೆ, ಮೈಸೂರು ದಸರಾ ಕುಸ್ತಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ , ಬೆಳಗಾಂ ಕುಸ್ತಿ ಹಬ್ಬ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

## ಇಂಗ್ಲಿಷ್ ಕಲಿತವರಿಂದಲೇ ನೈತಿಕ ಮೌಲ್ಯಗಳು ಕುಸಿತ



**ಹಿರಿಯ ಪತ್ರಕರ್ತ ಉಜ್ಜಿನಿ ರುದ್ರಪ್ಪ ಅವರ 'ಅಮ್ಮ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ವ್ಯಾಕುಲತೆ**

ಕೊಟ್ಟೂರು, ಜೂ. 26 - ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತವರಿಂದಲೇ ನೈತಿಕ ಮೌಲ್ಯಗಳು ಕುಸಿತಕ್ಕೆ ಒಳಗಾಗಿದ್ದು, ಸಂಬಂಧಗಳು ಸಂಪೂರ್ಣ ಹಾಳಾಗಿ, ವೃದ್ಧಾಶ್ರಮಗಳು ಹೆಚ್ಚಾಗಲಿಕ್ಕೆ ಕಾರಣವಾಗಿವೆ. ಇದು ನಿಜಕ್ಕೂ ಮುಂದುವರೆದ ಈ ದಿನಗಳಲ್ಲಿ ನಾಚಿಕೆ ಪಡುವಂತಹ ವಿಷಯವಾಗಿದೆ ಎಂದು ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಹೇಳಿದರು.

ಪಟ್ಟಣದ ಬಾಲಾಜಿ ಕನ್ವೆನ್ಷನಲ್ ಹಾಲ್‌ನಲ್ಲಿ ಜೆಸಿಐ ಕೊಟ್ಟೂರು ಹಸಿರು ಹೊನಲು ತಂಡದವರ ಸಹಯೋಗದೊಂದಿಗೆ ಭಾನುವಾರ ಆಯೋಜನೆಗೊಂಡಿದ್ದ ಉಜ್ಜಿನಿ ರುದ್ರಪ್ಪ ಬರೆದಿರುವ 'ಅಮ್ಮ' ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಮಾತೃಭಾಷೆ ಕನ್ನಡದಲ್ಲಿ ಕಲಿತವರು ಸಂಸ್ಕೃತಿ, ಸಂಬಂಧಗಳನ್ನು ಗಟ್ಟಿಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರೆ ಉನ್ನತ ವಿದ್ಯಾಭ್ಯಾಸದ ಹೆಸರಿನಲ್ಲಿ ಇಂಗ್ಲಿಷ್ ಮಾಧ್ಯಮ ಕಲಿತ ಬಹುತೇಕರು ತಮ್ಮ ತಂದೆ-ತಾಯಿ, ಬಂಧು-ಬಳಗವನ್ನು ತೊರೆದು ಅನಾಥರನ್ನಾಗಿಸುವ ಮೂಲಕ ಕಲಿತ ಶಿಕ್ಷಣದ ಮೌಲ್ಯಕ್ಕೆ ದಕ್ಕೆ ತರುತ್ತಿದ್ದಾರೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರದಲ್ಲಿ ಈ ಮೊದಲು ಕೇವಲ 8000 ಗಳಷ್ಟಿದ್ದ ವೃದ್ಧಾಶ್ರಮಗಳು, ಇದೀಗ 25ಸಾವಿರಕ್ಕೂ ಹೆಚ್ಚಾಗಿರುವುದು ನೋವಿನ ಸಂಗತಿ ಎಂದು ಅವರು ಹೇಳಿ,ಕೊಟ್ಟೂರಿನಲ್ಲಿನ ಉತ್ತಂಗಿ ರುದ್ರಮ್ಮ ತನ್ನೆಲ್ಲಾ ಸರ್ವ ಭಾಗ್ಯವನ್ನು ತೊರೆದು ಅನಾಥರು, ವೃದ್ಧರನ್ನು ಯಾವುದೇ ಸರ್ಕಾರದ ಹಂಗಿಲ್ಲದೆ ಪೋಷಣೆ ಮಾಡಿ ಆಶ್ರಯ ನೀಡಿರುವುದು ನಿಜಕ್ಕೂ ಮಾದರಿ ಎಂದರು.

'ಅಮ್ಮ' ಪುಸ್ತಕ ಕೃತಿ ಪರಿಚಯ ಮಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಮರ್ಶಕ ಡಾ.ವೆಂಕಟಗಿರಿ ದಳವಾಯಿ ಮಾತನಾಡಿ, ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ವೃದ್ಧರನ್ನು ಅರ್ಥಪೂರ್ಣವಾಗಿ ಸಾಕುತ್ತಿರುವ ಮಾತೆ ಉತ್ತಂಗಿ ರುದ್ರಮ್ಮ ಕುರಿತು ಪುಸ್ತಕ ಬಿಡುಗಡೆಯಾಗುತ್ತಿರುವುದು ನಿಜಕ್ಕೂ ಸಮಾಜಕ್ಕೆ ಉತ್ತಮ ಸಂದೇಶ ಕೊಡುವ ಕೆಲಸವಾಗಿದೆ ಎಂದರು.

ಹಲವು ಬಗೆಯ ಹಿರಿಮೆ, ಗರಿಮೆಗಳನ್ನು ಹೊಂದಿರುವ ನಮ್ಮ ರಾಷ್ಟ್ರದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿರುವುದು ನೋವಿನ ಸಂಗತಿ. ರುದ್ರಮ್ಮ ಮಾತೆಯ ಪುಸ್ತಕದಿಂದಾದರೂ ರೋಗಗ್ರಸ್ಥ ಸಮಾಜ ಸುಧಾರಣೆಯತ್ತ ಸಾಗಬೇಕಿದೆ ಎಂದರು.

ಹಿರಿಯ ವಕೀಲ ಎಂ.ಎಂ.ಜೆ. ಸ್ವರೂಪಾನಂದ, ಚಾನುಕೋಟಿ ಮಠಾಧ್ಯಕ್ಷ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಉತ್ತಂಗಿ ರುದ್ರಮ್ಮ, ನಿವೃತ್ತ ಮುಖ್ಯೋಪಾಧ್ಯಾಯ ರಾಜಣ್ಣ, ಬಿ.ಆರ್.ವಿಕ್ರಮ್, ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಸೋಮಶೇಖರ್ ಹೆಚ್. ಕೆಂಚಾರೆಡ್ಡಿ, ವೃಷಭೇಂದ್ರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಅಮ್ಮ ಕೃತಿ ಲೇಖಕ ಉಜ್ಜಿನಿ ರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಗರಾಜ ಸ್ವಾಗತಿಸಿದರು. ಎಸ್.ಎಂ.ಗುರುಪ್ರಸಾದ್ ವಂದಿಸಿದರು. ಕಾವ್ಯ ನಿರೂಪಿಸಿದರು.

## ಅಗ್ನಿಪಥ್ ಯೋಜನೆಯ ವಿರುದ್ಧ ಸತ್ಯಾಗ್ರಹ

ಅಗ್ನಿಪಥ ಯೋಜನೆಯ ವಿರುದ್ಧ ರಾಷ್ಟ್ರದಾದ್ಯಂತ ಯುವಕರು ರೊಚ್ಚಿಗೆದ್ದಿದ್ದು, ಈ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ 10.30 ಗೆ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದಿಂದ ಅಗ್ನಿಪಥ್ ಯೋಜನೆಯ ವಿರುದ್ಧ ಸತ್ಯಾಗ್ರಹವನ್ನು ದಕ್ಷಿಣ ಬ್ಲಾಕ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮತ್ತು ಉತ್ತರ ವಿಧಾನಸಭೆ ಬ್ಲಾಕ್ ಅಧ್ಯಕ್ಷ ಕೆ.ಜಿ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಅಮರ್ ಜವಾನ್ ಪಾರ್ಕ್ ಹತ್ತಿರ ಸತ್ಯಾಗ್ರಹ ನಡೆಯಲಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಸಿಪಿಐ ಕಚೇರಿಗೆ ಕಾಂಗ್ರೆಸ್ ವಿದ್ಯಾರ್ಥಿ ಮುಖಂಡರಿಂದ ದಾಳಿಗೆ ಯತ್ನ : ಖಂಡನೆ

ದಾವಣಗೆರೆ ಜೂ. 26 - ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಸಿಪಿಐ ರಾಜ್ಯ ಮಂಡಳಿ ಕಚೇರಿಗೆ ಏಕಾ ಏಕಿ ತೆರಳಿ ವಿನಾ ಕಾರಣ ಮುತ್ತಿಗೆ ಹಾಕಿ ದಾಳಿ ಮಾಡಲು ಯತ್ನಿಸಿದ ಕಾಂಗ್ರೆಸ್ ವಿದ್ಯಾರ್ಥಿ ಸಂಘಟನೆ ಮುಖಂಡರ ನಡೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಮಂಡಳಿ ಕಾರ್ಯದರ್ಶಿ ಆವರಗೆರೆ ಚಂದ್ರು, ಖಜಾಂಚಿ ಆನಂದ ರಾಜ್, ಸಹ ಕಾರ್ಯದರ್ಶಿ ಹೆಚ್. ಜಿ. ಉಮೇಶ್, ಆವರಗೆರೆ ವಾಸು ಖಂಡಿಸಿದ್ದಾರೆ.

## ನಾಮದೇವ ಸಿಂಪಿ ಸಮಾಜದಿಂದ ಉಚಿತ ಆರೋಗ್ಯ ತಪಾಸಣೆ



ದಾವಣಗೆರೆ, ಜೂ.26- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಚಿಗಟೇರಿ ಆಸ್ಪತ್ರೆ ಇವರ ಸಹಯೋಗದಲ್ಲಿ ನಾಮದೇವ ಸಿಂಪಿ ಸಮಾಜದ ವತಿಯಿಂದ ನಗರದ ದೊಡ್ಡಪೇಟೆಯ ನಾಮದೇವ ಭಜನಾ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವು ಈಚೆಗೆ ನಡೆಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ವಿಪ ಮಾಜಿ ಮುಖ್ಯ ಸಚೇತಕ ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ, ಇಂದಿನ ಪರಿಸ್ಥಿತಿಯಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಸಮಯೋಚಿತವಾಗಿದ್ದು, ಇವತ್ತಿನ ದುಬಾರಿ ವೈದ್ಯಕೀಯ ಚಿಕಿತ್ಸಾ ವೆಚ್ಚದಲ್ಲಿ ಈ ರೀತಿಯ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿರುವುದು ಉತ್ತಮ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ನಾಮದೇವ ಸಿಂಪಿ ಸಮಾಜದ ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ನೀಡಿದ 20 ವೈದ್ಯ ತಂಡವನ್ನು ಸನ್ಮಾನಿಸಲಾಯಿತು.

ಶಿಬಿರದಲ್ಲಿ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಂ.ಎಸ್.ವಿಠಲ್, ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ, ಪ್ರಧಾನ ಕಾರ್ಯದರ್ಶಿ ಮನೋಹರ ವಿ.ಬೊಂಗಾಳೆ, ಆರೋಗ್ಯ ಸಮಿತಿಯ ಅಧ್ಯಕ ಡಾ|| ಎ.ಬಿ. ಕಾಕಡೆ, ಸಮಿತಿಯ ಸಂಚಾಲಕ ಪರಶುರಾಮ ಬೊಂಗಾಳೆ, ವಿಠಲ್.ಕೆ.ರಾಕುಂಡೆ, ಕೆ.ಬಿ.ಶಂಕರನಾರಾಯಣ ಹಾಗೂ ವೈದ್ಯರಾದ ಡಾ|| ಪ್ರವೀಣ್, ಡಾ|| ಚಿದಾನಂದ ಕೋಳೇಕರ್, ಡಾ|| ಲಕ್ಷ್ಮೀ ಹೆಚ್.ಪಿ ಉಪಸ್ಥಿತರಿದ್ದರು.



# ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಶೇ.25 ಲಾಭಾಂಶ ಘೋಷಣೆ

(1ನೇ ಪುಟದಿಂದ) 51ಕೋಟಿ ರೂ. ಸ್ವಂತ ಬಂಡವಾಳದೊಂದಿಗೆ ಬ್ಯಾಂಕು ಸುಭದ್ರವಾಗಿ ಪ್ರಗತಿ ಪಥದತ್ತ ಸಾಗುತ್ತಿದೆ ಎಂದರು.

ಕಳೆದ ಸಾಲಿನಲ್ಲಿ ದೈವಾಧೀನರಾದ ಸದಸ್ಯರ ವಾರಸುದಾರರಿಗೆ 17ಲಕ್ಷದ 15ಸಾವಿರ ರೂ. ಅಪಘಾತದಲ್ಲಿ ಮರಣ ಹೊಂದಿದ ಇಬ್ಬರು ಸದಸ್ಯರ ವಾರಸುದಾರರಿಗೆ 2 ಲಕ್ಷ ರೂ., ಆರಾಧ್ಯ ಆಯುಷ್ಮಾನ್ ನಿಧಿಯಿಂದ ಅರ್ಹ ಸದಸ್ಯರ ತುರ್ತು ಚಿಕಿತ್ಸೆಗಾಗಿ 9 ಲಕ್ಷ 39 ಸಾವಿರ ರೂ. ಧನ ಸಹಾಯವನ್ನು ನೀಡಲಾಗಿದೆ ಎಂದರಲ್ಲದೇ, ಯಶಸ್ವೀ 50 ವರ್ಷಗಳನ್ನು ಪೂರೈಸಿರುವ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ವಿಶೇಷವಾಗಿ ಆಚರಿಸುವ ಯೋಜನೆಯೂ ಇದೆ ಎಂದರು.

ಸಹಕಾರ ಸಂಪನ್ಮೂಲ ವ್ಯಕ್ತಿ, ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ್ ನಿರೂಪಿಸಿದ ಕಾರ್ಯಕ್ರಮದ ಪ್ರಾರ್ಥನಾ ಗೀತೆಯನ್ನು ಶ್ರೀಮತಿ ಸಂಗೀತಾ ರಾಘವೇಂದ್ರ ಹಾಗೂ ಶ್ರೀಮತಿಯರಾದ ಶಶಿಕಲಾ ರುದ್ರಯ್ಯ, ಉಮಾ ವಾಗೀಶ್, ಶೈಲಾ ಹಾಲಸ್ವಾಮಿ ಹಾಡಿದರು.

ಸ್ವಾಗತವನ್ನು ನಿರ್ದೇಶಕ ಶಂಕರ್ ರಾವ್ ಖಿಟಾವಕರ್ ಕೋರಿದರು. ಕಳೆದ ವಾರ್ಷಿಕ ಮಹಾಸಭೆಯ ನಡಾವಳಿಯ ವಾಚನ ಹಾಗೂ ಅನುಮೋದನಾ ಸ್ವೀಕಾರವನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎಂ.ಶಿವಲಿಂಗ ಸ್ವಾಮಿ ಮಾಡಿದರೆ, ವಾರ್ಷಿಕ ವರದಿ ಮಂಡನೆಯನ್ನು ನಿರ್ದೇಶಕ ಎ.ಹೆಚ್. ಕುಬೇರಪ್ಪ ಮಾಡಿದರು.

ಲಾಭ-ನಷ್ಟ, ಅಢಾವೆ ಪತ್ರಿಕೆಗಳ ಮಂಡನೆಯನ್ನು ಉಪಾಧ್ಯಕ್ಷ ಎಸ್.ಕೆ. ವೀರಣ್ಣ ಮಾಡಿದರೆ ಹೆಚ್ಚುವರಿ ವೆಚ್ಚಗಳಿಗೆ ಅನುಮೋದನೆಯನ್ನು ನಿರ್ದೇಶಕ ಕಿರುವಾಡಿ ಸೋಮಶೇಖರ್, ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆಯನ್ನು ನಿರ್ದೇಶಕ ರಮಣ್ ಲಾಲ್ ಪಿ. ಸಂಘವಿ ಪಡೆದರು. 2021-22ನೇ ಸಾಲಿನ ಲಾಭ ವಿಲೇವಾರಿ ಮಾಡಿ ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದ ಬ್ಯಾಂಕಿನ ಅಧ್ಯಕ್ಷ ಎನ್.ಎ.ಮುರುಗೇಶ್ ರವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಹಿರಿಯ ಸದಸ್ಯರುಗಳನ್ನು ಸನ್ಮಾನಿಸಲಾಯಿತು. ನಿರ್ದೇಶಕರುಗಳಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶಶಿಕಲಾ ರುದ್ರಯ್ಯ, ಅನಿಲಾ ಇಂದೂಧರ ನಿಶಾನಿಮಠ್, ಉಮಾ ವಾಗೀಶ್, ಜಿ.ಸಿ.ವಸುಂಧರ, ಕೆ.ಎಂ. ಶೈಲಾ ಹಾಲಸ್ವಾಮಿ, ಎಸ್.ಕೆ.ಪ್ರಭುಪ್ರಸಾದ್, ಕೆ.ಎಂ.ಜ್ಯೋತಿಪ್ರಕಾಶ್, ನಾಗೇಂದ್ರಚಾರಿ, ಪಿ.ಹೆಚ್.ವೆಂಕಪ್ಪ, ಎ.ಕೊಟ್ರೇಶ್, ಆರ್.ವಿ. ಸಿರಸಾಲಿಮಠ, ಕಿರಣ್ ಆರ್.ಶೆಟ್ಟಿ, ಜಿ.ಕೆ. ವೀರಣ್ಣ, ಕೆ.ಹೆಚ್.ಶಿವಯೋಗಪ್ಪ, ಕೆ.ಎಂ. ಬಸವರಾಜ್ ಉಪಸ್ಥಿತರಿದ್ದರು.

ತ್ರಿಶೂಲ್ ಕಲಾಭವನದಲ್ಲಿ ಇಂದು ಈ ಮಹಾಸಭೆ ನೆರವೇರಿತು.

## ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆ: ಮಗನಿಗೆ ಚಿನ್ನ, ಅಪ್ಪನಿಗೆ ಕಂಚು



ದಾವಣಗೆರೆ, ಜೂ. 26- ಇತ್ತೀಚಿಗೆ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಕನ್ನಿಕಾ ಪರಮೇಶ್ವರಿ ಕೋ- ಆಪ್ ಬ್ಯಾಂಕಿನ ಉದ್ಯೋಗಿ ರಕ್ಷಿತ್ ಚಿನ್ನದ ಪದಕವನ್ನು, ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು, ರಕ್ಷಿತ್ ತಂದೆ ಪಿ. ವಿಶ್ವನಾಥ್ ಕಂಚಿನ ಪದಕ ಪಡೆಯುವ ಮೂಲಕ ಬರುವ ಜುಲೈ 5 ರಿಂದ 10 ರವರೆಗೆ ತೆಲಂಗಾಣ ರಾಜ್ಯದ ಹೈದರಾಬಾದ್ ನಲ್ಲಿ ನಡೆಯುವ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ಶಿರಮಗೊಂಡನಹಳ್ಳಿಯಲ್ಲಿ ಗಂಗಾ ಪರಮೇಶ್ವರಿ ಜಯಂತಿ ಆಚರಣೆ



ದಾವಣಗೆರೆ, ಜೂ. 26- ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಮಂಗಳವಾರ ಶ್ರೀ ಗಂಗಾಪರಮೇಶ್ವರಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಳೆ, ಬೆಳೆ ಸಮೃದ್ಧಿಯಾಗಿ ರೈತರ ಜೀವನ ಹಸನಾಗಲೆಂದು ಪ್ರಾರ್ಥಿಸಲಾಯಿತು.

ಸಮಾಜದ ಹಿರಿಯರಾದ ಜಯಪ್ಪ, ಶಿವಮೂರ್ತಿ, ಸುಮಂಗಲಿಯರಾದ ಭಾರತಿ ಮಾಲತೇಶ್, ರೇಣುಕಾ ಮೋಹನ್ ಕುಮಾರ್, ಸುಷ್ಮಾ ಮಂಜುನಾಥ್, ಸವಿತಾ ಹನುಮಂತಪ್ಪ, ಮಾಲತಿ ಪ್ರಕಾಶ್, ಪ್ರೇಮಾ ಮಲ್ಲಿಕಾರ್ಜುನ್, ಸರಿತಾ ಉಮೇಶ್, ರೇಣುಕಾ ಹನುಮಂತ, ಮಾನಸ ಭಾಸ್ಕರ್, ಪ್ರೀತಿ ಲಕ್ಷ್ಮಣ, ವಾಣಿಶ್ರೀ ಚಂದ್ರಶೇಖರ್, ಮಧು ಲಿಖಿತಾ, ಪ್ರಮುಖರಾದ ರಮೇಶ್ ಚಂದ್ರ, ಬಾಬು, ಕೆ. ರಮೇಶ್, ಕೆ. ಮಲ್ಲಪ್ಪ, ಕೆ.ಎಂ. ಮಂಜುನಾಥ, ಕೆ. ಮಾಲತೇಶ್, ಎಂ. ಮನೋಜ್, ಗಜೇಂದ್ರ, ಅಭಿಷೇಕ್, ರಾಜು ವೆಲ್ಡಿಂಗ್ ಶಾಪ್ ಮಂಜುನಾಥ್ ಜರೇಕಟ್ಟೆ, ಕೆ. ಮಂಜುನಾಥ್, ಮಹಾಂತೇಶ್ ಗೊರಪ್ಪರ, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ಯೋಗಿ ನಾರೇಯಣ ಬಲಿಜ ಸಂಘದ ಸಭೆ

ದಾವಣಗೆರೆ, ಜೂ. 26- ಜಿಲ್ಲಾ ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಟಿ.ಹೆಚ್. ಸುರೇಂದ್ರ ಅವರ ಅಧ್ಯಕ್ಷತೆ ಯಲ್ಲಿ ನಾಡಿದ್ದು ದಿನಾಂಕ 28ರ ಮಂಗಳವಾರ ಬೆಳಿಗ್ಗೆ 11ಕ್ಕೆ ಬಲಿಜ ವಿದ್ಯಾರ್ಥಿ ನಿಲಯದಲ್ಲಿ ಕರೆಯಲಾಗಿದೆ ಎಂದು ಸಂಘದ ಕಾರ್ಯದರ್ಶಿ ನರಸಿಂಹಮೂರ್ತಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಜೀವನ ಸಮೃದ್ಧಿಗೆ ಕಾಯಕ ಮುಖ್ಯ : ರಂಭಾಪುರಿ ಶ್ರೀ



ನ್ಯಾಮತಿ

ನ್ಯಾಮತಿ, ಜೂ.26- ಉಜ್ವಲ ಭವಿಷ್ಯಕ್ಕೆ ನಿರಂತರ ಶ್ರಮ ಮತ್ತು ಸಾಧನೆ ಮುಖ್ಯ. ಜೀವನ ಸಮೃದ್ಧಿಗೆ ಕಾಯಕ ಬಹು ದೊಡ್ಡ ಶಕ್ತಿಯಾಗಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸಂಗೊಳ್ಳಿ ರಾಯಣ್ಣ ರಸ್ತೆ ಪಕ್ಕ ನಿರ್ಮಿಸಿದ ಮಾನವ ಧರ್ಮ ಮಂಟಪದಲ್ಲಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ದೇಹವನ್ನು ದುಡಿಮೆಗೆ ಮನಸ್ಸನ್ನು ಭಗವಂತನಿಗೆ ಅರ್ಪಿಸಿ ಮುನ್ನಡೆದಾಗ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಮನುಷ್ಯ ಜೀವನದಲ್ಲಿ ಧರ್ಮ ದೇವರು ಮತ್ತು ಗುರುವನ್ನು ಎಂದಿಗೂ ಮರೆಯಬಾರದು. ಶಿವ ಪಥವನರಿಯಲು ಶ್ರೀ ಗುರುವಿನ ಮಾರ್ಗದರ್ಶನ ಮತ್ತು ಬೋಧಾಮೃತ ಅವಶ್ಯಕ. ಪರರು ಮಾಡಿದ ಅಪಕಾರ ನಾವು ಮಾಡಿದ ಉಪಕಾರ ಯಾವಾಗಲೂ ಮರೆಯಬೇಕು. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೌಲ್ಯಾಧಾರಿತ ಬದುಕಿಗೆ ಆದರ್ಶ ವಿಚಾರಗಳನ್ನು ಬೋಧಿಸಿದ್ದಾರೆ. ಅರಿತು ಆಚರಿಸುವುದೇ ನಿಜವಾದ ಧರ್ಮ. ಮರೆವು ಕಳೆದು ಅರಿವನ್ನು ಉಂಟು ಮಾಡುವುದು ಗುರುವಿನ ಧರ್ಮವಾಗಿದೆ. ಜಾತಿ ಜನಾಂಗಗಳ ಸಂಘರ್ಷ ನಿಂತು ಸಾಮರಸ್ಯ ಸೌಹಾರ್ದತೆ ಸಮಾಜದಲ್ಲಿ ಬೆಳೆದು ಬರುವ ಅವಶ್ಯಕತೆಯಿದೆ. ಧರ್ಮ ಮತ್ತು ರಾಜಕೀಯ ಮಧ್ಯೆ ಆಗಾಗ್ಗೆ ಸಂಘರ್ಷಣೆ ನಡೆಯುವುದು ಒಳ್ಳೆಯದಲ್ಲ. ಅವರವರ ಕರ್ತವ್ಯಗಳನ್ನು ಅವರವರು ಮಾಡಿ ಸಮಾಜದ ಸ್ವಾಸ್ಥ್ಯ ಕಾಪಾಡಿಕೊಂಡು ಬರಬೇಕೆಂದು ಕರೆಯಿತ್ತರು.

ಹಾರನಹಳ್ಳಿ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ನುಡಿ ನಮನ ಸಲ್ಲಿಸಿದರು. ಮಠದ ವಿಶ್ವಾರಾಧ್ಯರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಂಬಾರ ನಾಗರಾಜಪ್ಪ ಸ್ವಾಗತಿಸಿದರು.

## ಪಿಯುಸಿಯಲ್ಲಿ ಮೊದಲ ರ್‍ಯಾಂಕ್ ವಿದ್ಯಾರ್ಥಿನಿ ಮನೆಗೆ ಶಾಸಕರ ಭೇಟಿ



ದಾವಣಗೆರೆ, ಜೂ. 26 - ದ್ವಿತೀಯ ಪಿಯುಸಿಯಲ್ಲಿ ಮೊದಲ ರ್‍ಯಾಂಕ್ ಗಳಿಸಿರುವ ಹ್ಯಾರಡ ಗ್ರಾಮದ ವಿದ್ಯಾರ್ಥಿನಿ ಸಹನಾ ಮಡಿವಾಳ ಅವರ ಮನೆಗೆ ಶಾಸಕ ಪಿ.ಟಿ.ಪರಮೇಶ್ವರನಾಯ್ಕ ಇಂದು ಭೇಟಿ ನೀಡಿ, ವಿದ್ಯಾರ್ಥಿಯನ್ನು ಸನ್ಮಾನಿಸಿದ್ದಾರೆ. ವಿದ್ಯಾರ್ಥಿನಿಯ ಶೈಕ್ಷಣಿಕ ವಿದ್ಯಾಭ್ಯಾಸಕ್ಕಾಗಿ ಪ್ರತಿವರ್ಷ 25000 ವೈಯಕ್ತಿಕವಾಗಿ ನೀಡುವುದಾಗಿ ಶಾಸಕರು ಘೋಷಿಸಿದ್ದಾರೆ.

## ಬಿಐಇಟಿ ಕಾಲೇಜಿನ 'ನಮ್ಮ ದವನ' ಉತ್ಸವದಲ್ಲಿ ವಚನ್ ಹೊಸಮಠ, ಹೃಷಿಕಾ ಸಿಂಗ್‌ಗೆ ಪ್ರಶಸ್ತಿ



ದಾವಣಗೆರೆ, ಜೂ.26 ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ದಲ್ಲಿ ಮೊನ್ನೆ ನಡೆದ 'ನಮ್ಮ ದವನ' ಸಾಂಸ್ಕೃತಿಕ ಉತ್ಸವದ ಫ್ಯಾಷನ್ ಷೋ ಕಾರ್ಯಕ್ರಮದಲ್ಲಿ ವಚನ್ ಹೊಸಮಠ ಅವರು ಮಿಸ್ಟರ್ ಬಿಐಇಟಿ -2022 ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗ 6ನೇ ಸೆಮಿಸ್ಟರ್ ವಿದ್ಯಾರ್ಥಿನಿ ಜೆ.ಈ. ಹೃಷಿಕಾ ಸಿಂಗ್ ಅವರು ಮಿಸ್ ಬಿಐಇಟಿ -2022 ಪ್ರಶಸ್ತಿಗೆ ಭಾಜನರಾಗಿದ್ದಾರೆ.


ವಚನ್ ಹೊಸಮಠ, ನಗರದ ಶ್ರೀಮತಿ ಜ್ಯೋತಿ ಮತ್ತು ಹೆಚ್.ವಿ. ಮಂಜುನಾಥಸ್ವಾಮಿ ದಂಪತಿ ಪುತ್ರ. ಹೃಷಿಕಾ ಸಿಂಗ್, ಶ್ರೀಮತಿ ರೂಪಾ ಮತ್ತು ಜೆ. ಈಶ್ವರ್‌ಸಿಂಗ್ ಕವಿತಾಳ್ ದಂಪತಿ ಪುತ್ರಿ.

## ನಾಳೆ ಗಂಗನರಸಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದಲ್ಲಿ ವಿಶೇಷ ಪೂಜೆ

ಹರಿಹರ, ಜೂ. 26- ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದಲ್ಲಿ ನಾಡಿದ್ದು ದಿನಾಂಕ 28 ರ ಮಂಗಳವಾರ ಮಣ್ಣೆತ್ತಿನ ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ.

ಅಂದು ಬೆಳಿಗ್ಗೆ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಮಠ ಹಾಗೂ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯ ಆಶ್ರಯದಲ್ಲಿ ಗಂಗನರಸಿ ಗ್ರಾಮದ ಹೊರಮಠ ದಲ್ಲಿರುವ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆ, ಅಭಿಷೇಕ ಮತ್ತು ಮಹಾಮಂಗಳಾರತಿ ನಡೆಯುವುದು.

ನಂತರ 11.30 ಕ್ಕೆ ಶ್ರೀಮತಿ ಭಾರತಿ ಕೋಂ ಕೆ. ಸತ್ಯನಾರಾಯಣ, ಮಾರುತಿ ಬಡಾವಣೆ, ಹುಣಸೂರು (ಮೈಸೂರು ಜಿಲ್ಲೆ) ಇವರಿಂದ ಮಹಾ ಪ್ರಸಾದ ವ್ಯವಸ್ಥೆ ನಡೆಯುವುದು ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರ ಹಾಗೂ ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte